Digitized by Arya Samaj Foundation Chennai and eGangotri

ಓಂ

ಭಾರತ ಆರ್ಯರ ಮೂಲನಿವಾಸ

ಸ್ವಾಮೀ ವಿದ್ಯಾನಂದ ಸರಸ್ವತೀ

ಆರ್ಯ ಸಮಾಜ, ಸ್ವಾಮೀ ಶ್ರದ್ಧಾನಂದ ಭವನ,
ವಿಶ್ವೇಶ್ವರಪುರಂ, ಬೆಂಗಳೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DONATIO

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

BHĀRATA ! ĀRYARA MOOLA NIVĀSA (Kannada)
—A treatise establishing INDIA as the correct Original Home of the Aryans.

Written in Hindi by: (Āryon K̄a Ādidesh)
SWAMI VIDYANANDA SARASWATI

Translated by : B. V. YATIRAJ

Edited by : UPENDRA BHOOPALA

Published (with the Financial Assistance from the Arya Samaj, Ashok Vihar, New Delhi) by : ARYA SAMAJ,
Swami Shraddhanand Bhavan,
Visvesvarapuram, Bangalore-560004
(Phone : 626380)

First Edition in Kannada : 15th August, 1989

Copies : 1,000

Pages : 44 + viii

Price : Rs. 5-00

Printed by : Y. V. KESHAVA MURTHY, Managing Director, Praja Printers Private Limited (National Award Winners), Praja Bhavan, 53/2, Bull Temple Road, Bangalore-19
Grams : 'Praja'. Phone : 604261, 625823

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ಮಾತು

ವೈದಿಕ ಸಾಹಿತ್ಯ ಬಹುಮಟ್ಟಿಗೆ ಸಂಸ್ಕೃತ, ಹಾಗೂ ಹಿಂದೀ ಭಾಷೆಗಳಲ್ಲಿರುವ ಪ್ರಸಕ್ತ ಸನ್ನಿವೇಶದಲ್ಲಿ ಅವುಗಳನ್ನು ಕನ್ನಡ ಭಾಷೆಗೆ ಅನುವಾದಿಸಿ, ಕನ್ನಡ ಜನತೆಗೆ ಮುಟ್ಟಿಸುವ ಕಾರ್ಯ ಅತ್ಯಾವಶ್ಯಕವಾಗಿ ಆಗಬೇಕಾಗಿದೆ.

ಕಿರುಹೊತ್ತಿಗೆ ಎನಿಸಿದರೂ, ಮಹತ್ವಪೂರ್ಣ ವಿಷಯದಿಂದ ಕೂಡಿರುವ 'ಆರ್ಯೋ° ಕಾ ಆದಿದೇಶ್' ಎಂಬ ಈ ಪುಸ್ತಿಕೆಯನ್ನು ಸ್ವಾಮೀ ವಿದ್ಯಾನಂದ ಸರಸ್ವತೀ ಅವರು ಹಿಂದೀ ಭಾಷೆಯಲ್ಲಿ ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಆರ್ಯರಾರು, ದಸ್ಯುಗಳಾರು, ಎಂಬುದನ್ನು ಬಹಳಷ್ಟು ಅಧ್ಯಯನ ಮಾಡಿ, ಚೆನ್ನಾಗಿ ವಿವರಿಸಿದ್ದಾರೆ. ಅಲ್ಲದೇ, ಆರ್ಯ ಮತ್ತು ದಸ್ಯುಗಳ ಬಗ್ಗೆ ಈವರೆಗೆ ಜನತೆಯಲ್ಲಿ ಮೂಡಿದ್ದ ಭ್ರಾಂತಭಾವನೆಯನ್ನು ತೊಡೆದುಹಾಕುವ ಪ್ರಯತ್ನ ನಡೆಸಿದ್ದಾರೆ. ಪಾಶ್ಚಾತ್ಯರು, ಹಾಗೂ ಆಂಗ್ಲರು (ಮತ್ತು ಅವರ ಉಚ್ಛಿಷ್ಟಭೋಗಿ ಹಿಂಬಾಲಕರಾದ ಕೆಲವು ಭಾರತೀಯ ವಿದ್ವಾಂಸರು) ಯಾವ ವೇದ ಮಂತ್ರಗಳ ಆಧಾರದಿಂದ, ಆರ್ಯರು ಭಾರತಕ್ಕೆ ಎಲ್ಲಿಂದಲೋ ಬಂದವರು, ಎಂಬುದನ್ನು ಕಲ್ಪಿತ ಇತಿಹಾಸದ ಮೂಲಕ ಭಾರತೀಯ ಜನತೆಗೆ ತಿಳಿಸಿ, ಅವರ ಮನಸ್ಸಿನಲ್ಲಿ ಯಾವ ವಿಧವಾದ ಭ್ರಾಂತಿಯನ್ನುಂಟು ಮಾಡಿದ್ದರೋ, ಮತ್ತು ಯಾವ ದುರುದ್ದೇಶ್ಯದಿಂದ ಈ ಪ್ರಯತ್ನ ನಡೆಸಿದ್ದರೋ, ಅದನ್ನು ಅವರ ಮನಸ್ಸಿನಿಂದ ತೊಡೆದುಹಾಕಲು, ಅದೇ ವೇದಮಂತ್ರಗಳ ಸತ್ಯ–ಅರ್ಥವನ್ನು ವಿವರಿಸುವ ಮೂಲಕ 'ಆರ್ಯರೇ ಈ ದೇಶದ (ಭಾರತದ) ಮೂಲನಿವಾಸಿಗಳು', ಎಂಬುದನ್ನು ಗ್ರಂಥಕರ್ತರು ಪ್ರತಿಪಾದಿಸಿದ್ದಾರೆ.

ವೈದಿಕ ಸಾಹಿತ್ಯವು ಕನ್ನಡ ಭಾಷೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರಕದಿರುವ ಇಂತಹ ಸನ್ನಿವೇಶದಲ್ಲಿ ಶ್ರೀಯುತ ಬಿ. ವಿ. ಯತಿರಾಜ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರು ಈ ಮಹತ್ವಪೂರ್ಣ ಕಿರುಹೊತ್ತಿಗೆಯನ್ನು ಕನ್ನಡಕ್ಕೆ ಅನುವಾದಿಸುವ ಮೂಲಕ ಕನ್ನಡ ಜನತೆಗೆ ಬಹಳ ಉಪಕಾರ ಮಾಡಿದ್ದಾರೆ. ಮೂಲ ಕೃತಿಗೆ ಧಕ್ಕೆಬಾರದಂತೆ, ಮೂಲ ಲೇಖಕರ ಅಭಿಪ್ರಾಯಗಳಿಗೆ ಎಲ್ಲಿಯೂ ತೊಂದರೆ ಬಾರದಂತೆ, ಶ್ರೇಯುತರು ಸೊಗಸಾದ ಕನ್ನಡದಲ್ಲಿ ಅನುವಾದಿಸಿದ್ದಾರೆ. ಇಂತಹ ಉಪಯುಕ್ತ ಗ್ರಂಥಗಳನ್ನು ಅವರು ಅನುವಾದಿಸಿ, ಕನ್ನಡ ಜನತೆಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವರೆಂದು ಹಾರೈಸುತ್ತೇವೆ.

ಈ ಕನ್ನಡ ಸಂಸ್ಕರಣದ ಪ್ರಕಾಶನಕ್ಕಾಗಿ 2,000 ರೂಪಾಯಿಗಳ ಹಣದ ವ್ಯವಸ್ಥೆಯನ್ನು ಗ್ರಂಥಕರ್ತರಾದ ಸ್ವಾಮೀ ವಿದ್ಯಾನಂದ ಸರಸ್ವತಿಗಳೇ ಆರ್ಯಸಮಾಜ, ಅಶೋಕವಿಹಾರ, ನವದೆಹಲಿಯ ಮೂಲಕವಾಗಿ ಮಾಡಿದ್ದಾರೆ. ಆದ್ದರಿಂದ, ಸ್ವಾಮೀಜೀಯವರಿಗೆ, ಮತ್ತು ಆರ್ಯಸಮಾಜ, ಅಶೋಕ ವಿಹಾರ, ನವದೆಹಲಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಈ ಕಿರುಹೊತ್ತಿಗೆಯು ಆಗಲೇ ಇತರ ಎಲ್ಲ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲೂ, ಹಾಗೂ ಇಂಗ್ಲಿಷಿನಲ್ಲೂ ಪ್ರಕಾಶಿತವಾಗಿದೆ.

ಕನ್ನಡಿಗರು ಬಹುಸಂಖ್ಯೆಯಲ್ಲಿ ಓದಿ, ಈ ಗ್ರಂಥದ ಪ್ರಯೋಜನವನ್ನು ಪಡೆದಲ್ಲಿ, ನಮ್ಮ ಶ್ರಮ ಸಾರ್ಥಕವಾಗುವುದೆಂದು ಭಾವಿಸಿದ್ದೇವೆ.

ಈ ಕಿರುಹೊತ್ತಿಗೆಯನ್ನು ಒಂದು ವಾರದಷ್ಟು ಅಲ್ಪಸಮಯದಲ್ಲೇ ಸುಂದರವಾಗಿ ಮುದ್ರಿಸಿಕೊಟ್ಟ ರಾಷ್ಟ್ರಪ್ರಶಸ್ತಿ ವಿಜೇತರಾದ ಪ್ರಜಾ ಪ್ರಿಂಟರ್ಸ್, ಪ್ರೈವೇಟ್ ಲಿಮಿಟೆಡ್, ಬಸವನಗುಡಿ, ಬೆಂಗಳೂರು ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಆರ್ಯ ಸಮಾಜ

ಸ್ವಾಮೀ ಶ್ರದ್ಧಾನಂದ ಭವನ — ಡಾ॥ ಆರ್. ರಾಧಾಕಿಶನ್ ವರ್ಮಾ, ಅಧ್ಯಕ್ಷ

ವಿಶ್ವೇಶ್ವರಪುರಂ, ಬೆಂಗಳೂರು — ಸತ್ಯವ್ರತ, ಕಾರ್ಯದರ್ಶಿ

ತಾ॥ 15-8-1989 (ಶಾ.ಶ.1911) — ಸುಧಾಮ, ಕೋಶಾಧ್ಯಕ್ಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭೂಮಿಕಾ

ಆರ್ಯಾ ಆರ್ಯಾವರ್ತೀಯಾಃ ॥

ವೇದದಲ್ಲಿ ಬಂದಿರುವ ಆರ್ಯ ಮತ್ತು ದಸ್ಯು ಶಬ್ದಗಳು ಗುಣ ವಾಚಕವಾಗಿದ್ದು, ಜಾತಿವಾಚಕವಾಗಿರುವುದಿಲ್ಲ. ಪಾಶ್ಚಾತ್ಯ ವಿದ್ವಾಂಸರು ಈ ಶಬ್ದಗಳ ವಾಸ್ತವಿಕ ಅರ್ಥವನ್ನು ಗ್ರಹಿಸದೇ, ಅಥವಾ ಬೇಕೆಂದೇ, ಆರ್ಯರೆಂದು ಕರೆಯಲ್ಪಡುವವರು ಭಾರತದ ಮೂಲನಿವಾಸಿಗಳಲ್ಲವೆಂದು ಸಿದ್ಧಪಡಿಸಲು ಪ್ರಯತ್ನಿಸಿದ್ದರು. ಇಂದು, ಆದಿವಾಸೀ ಅಥವಾ ಹಿಂದುಳಿದ ಜಾತಿಗಳೆಂದು ಕರೆಯಲಾಗುವ ಇಲ್ಲಿನ ಮೂಲನಿವಾಸಿಗಳನ್ನೇ ದೇಶದ ನ್ಯಾಯವಾದ ಒಡೆಯರು, ಎಂದು ಕಲ್ಪಿಸಲಾಗಿದೆ. ನಮ್ಮನ್ನು ಅಪಮಾನ ಗೊಳಿಸಲೆಂಬುದು, ಹಾಗೂ ನಾವು ಪರಸ್ಪರ ಹೋರಾಡಲೆಂಬುದು ಅವರ ಈ ಕಲ್ಪನೆಯ ಉದ್ದೇಶ್ಯವಾಗಿದ್ದಿತು. ವೇದ ಮಂತ್ರಗಳಿಗೆ ಕಲ್ಪಿತ ಅರ್ಥ ವನ್ನು ಮಾಡಿ, ಆರ್ಯರು ಆದಿವಾಸಿಗಳೊಡನೆ ಹೋರಾಡುತ್ತಿದ್ದುದಲ್ಲದೇ, ಪರಸ್ಪರ ತಮ್ಮ-ತಮ್ಮಲ್ಲೇ ಕಾದಾಡುತ್ತಿದ್ದರೆಂದೂ ಹೇಳಲಾಗಿದೆ. ದಾಕ್ಷಿಣಾತ್ಯರ ಮನಸ್ಸಿನಲ್ಲಿ ಉತ್ತರ ಭಾರತೀಯರ ಮೇಲೆ ತಿರಸ್ಕಾರ ಭಾವನೆ ಯನ್ನುಂಟು ಮಾಡುವ ಸಲುವಾಗಿ, ಉತ್ತರದಲ್ಲಿನ ಆರ್ಯರು ವಿದೇಶೀ ಆಕ್ರಮಣಕಾರರಾಗಿದ್ದು, ಇಲ್ಲಿನ ಮೂಲ ನಿವಾಸಿಗಳ ಮೇಲೆ ವಿವಿಧರೀತಿಯ ಅತ್ಯಾಚಾರಗಳನ್ನೆಸಗಿ, ಯುದ್ಧದಲ್ಲಿ ವಿಜಯಿಗಳಾಗಿ, ಬಲಾತ್ಕಾರವಾಗಿ ಈ ದೇಶದಲ್ಲಿ ಅಧಿಕಾರಾರೂಢರಾಗಿ ನೆಲೆಸಿದರು, ಎಂದು ಸಿದ್ಧಮಾಡಲು ಪಾಶ್ಚಾತ್ಯ ವಿದ್ವಾಂಸರು ಪ್ರಯತ್ನಿಸಿದರು.

ಇಡೀ ವಿಶ್ವದಲ್ಲೇ ಪ್ರಪ್ರಥಮವೆನಿಸಿಕೊಂಡು ನಿರ್ವಿವಾದರೂಪ ದಲ್ಲಿರುವ ಋಗ್ವೇದದಂತಹ ಮಹಾ ಗ್ರಂಥವನ್ನು ಬರೆದವರು ಆರ್ಯರೇ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬುದು ಪಾಶ್ಚಾತ್ಯರ ಮತವಾಗಿದ್ದರೂ ಕೂಡ, ಆದರಲ್ಲೆಲ್ಲಿಯೂ ಆರ್ಯರು ಇಷ್ಟು ದೊಡ್ಡ ವಿಜಯವನ್ನು ಗಳಿಸಿದರೆಂದು ತಿಳಿಸಿರುವುದಿಲ್ಲ. ತಮ್ಮದೇ ವಿಜಯವನ್ನು ಹೇಳಿಕೊಳ್ಳಲಾರದಂತಹ ಜನ ಇಡೀ ವಿಶ್ವದಲ್ಲಿ ಯಾರಿದ್ದಾರೆ ? ಲಂಕೆಯ ಮೇಲಿನ ವಿಜಯವನ್ನು ರಾಮಾಯಣದಲ್ಲಿಯೂ, ಪಾಂಡವರ ವಿಜಯವನ್ನು ಮಹಾಭಾರತದಲ್ಲಿಯೂ, ಕವಿಗಳು ತಿಳಿಸಿದ್ದಾರೆ. ದ್ರಾವಿಡರ ಮೇಲಿನ ವಿಜಯದ ವರ್ಣನೆಯನ್ನು ಆರ್ಯರು ಯಾವುದೇ ಗ್ರಂಥದಲ್ಲಿಯೂ ತಿಳಿಸಿಲ್ಲವೇಕೆ ? ಆರ್ಯರು ಹೊರಗಿನಿಂದ ಬಂದವರಲ್ಲ ವೆಂಬುದೂ, ಇಲ್ಲಿನ ಪೂರ್ವನಿವಾಸಿಗಳಾದ ದ್ರಾವಿಡರನ್ನು ಓಡಿಸಿಲ್ಲವೆಂಬುದೂ ಕೇವಲ ಪಾಶ್ಚಾತ್ಯರ ಕೂಟನೀತಿಯಾಗಿತ್ತೆಂದು ಸ್ಪಷ್ಟವಾಗುತ್ತದೆ.

ವಾಸ್ತವವಾಗಿ ಈ ದೇಶದ ಪವಿತ್ರ ಭೂಮಿಯಲ್ಲಿ ಎಲ್ಲರಿಗಿಂತ ಮೊದಲು ಆರ್ಯರೇ ಪಾದಾರ್ಪಣ ಮಾಡಿದ್ದು, ಆದಿಕಾಲದಿಂದಲೂ ಎಂದರೆ, ಒಂದುನೂರ ತೊಂಬತ್ತೇಳು ಕೋಟಿ, ಇಪ್ಪತ್ತೊಂಬತ್ತು ಲಕ್ಷ, ನಲವತ್ತೊಂಬತ್ತು ಸಾವಿರದ ಎಂಬತ್ತಾರು (ಇಸವಿ 1986*ರಂದು– 197,29,49,086) ವರ್ಷಗಳಿಂದಲೂ ಅವರು ಇಲ್ಲಿಯೇ ನೆಲೆಸಿದ್ದಾರೆ. ವಸ್ತುತಃ ಇದು ಆಂಗ್ಲಪ್ರಭುತ್ವವನ್ನು ಸುದೃಢಗೊಳಿಸಲು, ಈ ದೇಶದ ಸಂಸ್ಕೃತಿಯನ್ನು ಸಮೂಲವಾಗಿ ನಾಶಗೊಳಿಸಲು, ಹಾಗೂ ಇಲ್ಲಿ ಕೈಸ್ತ– ಮುಸ್ಲಿಂ ಜನಾಂಗವನ್ನು ಹೆಚ್ಚಿಸಲು ಯೋಜಿಸಲಾಗಿದ್ದ ನಿಯೋಜಿತ ಒಳಸಂಚು! ಆದರಿಂದ ಈಗಲೂ ನಮಗೆ ಉಳಿಗಾಲವಿಲ್ಲವಾಗಿದೆ. ಈ ಒಳಸಂಚಿನ ಪರಿಣಾಮವಾಗಿ, ಹಿಂದೂ ಮುಸಲ್ಮಾನರ ನಡುವಣ ವಿದ್ವೇಷ ಬೆಳೆದು, ಪಾಕಿಸ್ತಾನ ಉದ್ಭವವಾಗಿದ್ದು, ಈಗ ಉತ್ತರದಲ್ಲಿ ಖಾಲಿಸ್ತಾನದ ಭೀಕರ ಸ್ವರೂಪ ತಲೆ ಎತ್ತುತ್ತಿದೆ. ಪೂರ್ವದಲ್ಲಿ ಈಸಾ, ಇಸ್ಲಾಂ, ಹಾಗೂ ಗೋರ್ಖಾಲ್ಯಾಂಡ್ ಇತ್ಯಾದಿಗಳ ಆಪಾಯವಿದ್ದು, ದಕ್ಷಿಣದಲ್ಲಿ ವಿಚ್ಛಿದ್ರಕಾರೀ ಭಾವನೆಗಳಿಗೆ ಎಡೆಕೊಟ್ಟಿದೆ.

---

*ಈ ಮೂಲಗ್ರಂಥ ಬರೆದ ವರ್ಷ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಯರು ವಿದೇಶೀ ಆಕ್ರಮಣಕಾರರೆಂಬ ಮಿಥ್ಯಾರೋಪ-ಕಲ್ಪನೆಯೇ ಇವೆಲ್ಲ ಕುತ್ಸಿತ ಭಾವನೆಗಳ ಮೂಲವಾಗಿದ್ದು, ಅದಕ್ಕೆ ಪ್ರತಿಯಾಗಿ ಯಥಾರ್ಥ ಸ್ವರೂಪವನ್ನು ತಿಳಿಸುವ ಲೇಖನ-ಗ್ರಂಥಗಳ ಆವಶ್ಯಕತೆ ಇದೆ. ಸ್ವಾಮೀ ವಿದ್ಯಾನಂದ ಸರಸ್ವತೀ ಅವರು ಈ ದಿಶೆಯಲ್ಲಿ ತಮ್ಮ ಪ್ರಯತ್ನ ಮಾಡಿದ್ದಾರೆ. ಇದರ ಮಹತ್ವವನ್ನು ಪಾಠಕರ ವಿವೇಚನೆಗೆ ಒಪ್ಪಿಸಲಾಗಿದೆ.

ದಯಾನಂದಮಠ
ದೀನಾನಗರ (ಪಂಜಾಬ್)

ಸರ್ವಾನಂದ ಸರಸ್ವತೀ
ಅಧ್ಯಕ್ಷ, ವೈದಿಕ ಯತಿ ಮಂಡಲ

(ಆರ್ಯಾವರ್ತದಲ್ಲಿ ಮೊದಲು ಯಾರೂ ಇರಲಿಲ್ಲ)

ಪ್ರಶ್ನೆ :—ಮೊದಲು ಈ ದೇಶದ ಹೆಸರು ಏನಾಗಿತ್ತು ? ಮತ್ತು ಇದರಲ್ಲಿ ಯಾರು ವಾಸಿಸುತ್ತಿದ್ದರು ?

ಉತ್ತರ :—ಇದಕ್ಕಿಂತ ಮೊದಲು ಈ ದೇಶಕ್ಕೆ ಯಾವ ಹೆಸರೂ ಇರಲಿಲ್ಲ. ಮತ್ತು ಆರ್ಯರಿಗಿಂತ ಮೊದಲು ಈ ದೇಶದಲ್ಲಿ ಯಾರೂ ವಾಸಿಸುತ್ತಲೂ ಇರಲಿಲ್ಲ. ಏಕೆಂದರೆ, ಆರ್ಯಜನರು ಸೃಷ್ಟಿಯ ಆದಿಯಲ್ಲಿ, ಸ್ವಲ್ಪ ಕಾಲಾನಂತರ, ಟಿಬೆಟ್ಟಿನಿಂದ ನೇರವಾಗಿ, ಈ ದೇಶಕ್ಕೇ ಬಂದು ನೆಲೆಸಿದ್ದರು.

ಪ್ರಶ್ನೆ :—ಕೆಲವರು ಹೇಳುತ್ತಾರೇನೆಂದರೆ—

"ಈ ಜನರು ಈರಾನಿನಿಂದ ಬಂದರು. ಆದುದರಿಂದಲೇ, ಈ ಜನರಿಗೆ 'ಆರ್ಯರು' ಎಂದು ಹೆಸರಾಗಿದೆ. ಇವರಿಗಿಂತ ಮೊದಲು ಇಲ್ಲಿ ಯಾರನ್ನು ಅಸುರರು, ರಾಕ್ಷಸರು–ಎಂದು ಕರೆಯುತ್ತಿದ್ದರೋ, ಆ ಕಾಡು ಜನರು ವಾಸ ಮಾಡುತ್ತಿದ್ದರು. ಆರ್ಯಜನರು ತಮ್ಮನ್ನು ದೇವತೆಗಳೆಂದು ಹೇಳಿಕೊಳ್ಳುತ್ತಿದ್ದರು. ಮತ್ತು ಯಾವಾಗ ಅವರೊಡನೆ ಸಂಗ್ರಾಮವಾಯಿತೋ, ಆಗ ಕಥೆಗಳಲ್ಲಿ ಅದಕ್ಕೆ 'ದೇವಾಸುರ-ಸಂಗ್ರಾಮ', ಎಂದು ಹೆಸರನ್ನಿಟ್ಟರು"—ಎಂದು.

ಉತ್ತರ :—ಈ ಮಾತು ಎಲ್ಲ ಬಗೆಯಿಂದಲೂ ಸುಳ್ಳು !

(ಸತ್ಯಾರ್ಥ ಪ್ರಕಾಶ, ಅಷ್ಟಮ ಸಮುಲ್ಲಾಸ)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಷಯಾನುಕ್ರಮಣಿಕೆ

ಪ್ರಕಾಶಕರ ಮಾತು	(iii)
ಭೂಮಿಕಾ	(v)
ಆರ್ಯರ ಮತ್ತು ಆರ್ಯಾವರ್ತದ ಬಗ್ಗೆ ಭ್ರಾಂತಿ	1
ವೇದಗಳಲ್ಲಿ ಇತಿಹಾಸವಿಲ್ಲ	14
'ಆರ್ಯ' ಮತ್ತು 'ದಸ್ಯು' ಶಬ್ದಗಳ ಸತ್ಯಾರ್ಥ	28

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

॥ ಓಽಮ್ ॥

ಭಾರತ! ಆರ್ಯರ ಮೂಲನಿವಾಸ

ಆರ್ಯರ ಮತ್ತು ಆರ್ಯಾವರ್ತದ ಬಗ್ಗೆ ಭ್ರಾಂತಿ

ಭವಿಷ್ಯವನ್ನು ರೂಪಿಸಲು ಕಳೆದು ಹೋದ ದಿನಗಳ ನೆನಪು ಅತ್ಯಾವಶ್ಯಕ. ಆದ್ದರಿಂದ, ಯಾರದಾದರೊಬ್ಬರ ಭವಿಷ್ಯವನ್ನು ಕೆಡಿಸಲು ಅವರ ಗತ ಜೀವಿತಕಾಲದ ನೆನಪಿಗೆ ಕಳಂಕವುಂಟುಮಾಡಿದಲ್ಲಿ, ಈ ಕೆಲಸ ಸುಲಭವಾಗುತ್ತದೆ. ಹಿಂದಿನ ದಿನಗಳ ನೆನಪುಗಳಿಗೆ ಕಳಂಕವುಂಟುಮಾಡುವುದು ಸರ್ವಥಾ ಸಾಧ್ಯವಿಲ್ಲವಾದರೂ, ಅವುಗಳನ್ನು ವಿಕೃತಗೊಳಿಸಿದಲ್ಲಿ ಆ ಬಗ್ಗೆ ತಿರಸ್ಕಾರ ಭಾವನೆಯುಂಟಾಗುವ ಸಂಭವವಿದೆ. ಈ ದೇಶವನ್ನು ಆಂಗ್ಲರ ಆಳ್ವಿಕೆಗೊಳಪಡಿಸಿ, ಆ ಮೂಲಕ ಕ್ರೈಸ್ತಮತದ ಪ್ರಚಾರ, ಹಾಗೂ ಪ್ರಸಾರ ಮಾಡುವುದೇ ಆಂಗ್ಲರು ಭಾರತಕ್ಕೆ ಬಂದ ಉದ್ದೇಶ್ಯವಾಗಿದ್ದಿತು. ಇಲ್ಲಿ ಅವರ ಪ್ರಭುತ್ವವನ್ನು ಸ್ಥಾಪಿಸಲು ಇಲ್ಲಿನ ಜನರ ನಡುವೆ ಅಂತಃಕಲಹ ಭಾವನೆ ಬೆಳೆಸುವುದು ಅತ್ಯಾವಶ್ಯಕವೆಂದು ಅವರು ಭಾವಿಸಿದ್ದರು. ಇದಕ್ಕಾಗಿ ಅವರು ಈ ದೇಶದ ಕೆಲವರನ್ನು ಮೂಲನಿವಾಸಿಗಳೆಂಬ, ಮತ್ತು ಕೆಲವರನ್ನು ವಿದೇಶಗಳಿಂದ ಬಂದು ಇಲ್ಲಿನ ಮೂಲನಿವಾಸಿಗಳೊಡನೆ ಹೋರಾಡಿ, ಪರಾಜಿತರನ್ನಾಗಿಮಾಡಿ, ಅಧಿಕಾರ ಗಳಿಸಿಕೊಂಡರೆಂಬ ವದಂತಿಯನ್ನು ಹರಡಿದರು. ಈ ಅಂತಃಕಲಹ ಭಾವನೆಯ ಬೀಜಾರೋಪಣದ ಪರಿಣಾಮದಿಂದಾಗಿಯೇ, ಇಂದು ನಾವು ದೇಶದ ಸಣ್ಣ–ಪುಟ್ಟ ಶಾಲೆಗಳಿಂದ ಹಿಡಿದು, ವಿಶ್ವವಿದ್ಯಾಲಯಗಳಲ್ಲಿಯೂ, ಕೋಲರು, ದ್ರಾವಿಡರು, ಭಿಲ್ಲರು, ಸಂಥಾಲರು, ಮತ್ತಿತರರು ಈ ದೇಶದ ಮೂಲನಿವಾಸಿಗಳಾಗಿದ್ದರೆಂದು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲಿಯಬೇಕಾಗಿದೆ. ಅಲ್ಲದೇ, 'ಕಾಲಾಂತರದಲ್ಲಿ ಈರಾನ್ ಮೊದಲಾದ ದೇಶ ಗಳಿಂದ ಕೆಲವು ಮಂದಿ (ಆರ್ಯರು) ಈ ದೇಶದ ಮೇಲೆ ಆಕ್ರಮಣ ಮಾಡಿ, ಇಲ್ಲಿನ ಆದಿವಾಸಿಗಳಲ್ಲ ನೇಕರನ್ನು ಕೊಂದು, ಕೆಲವರನ್ನು ಬಂಧಿಸಿ, ದಾಸರನ್ನಾಗಿ ಮಾಡಿಕೊಂಡರೆಂದೂ, ಮತ್ತೆ ಕೆಲವರು ಈ ಕೃತ್ಯದಿಂದ ಹೆದರಿ, ದಕ್ಷಿಣದ ಕಡೆ ಓಡಿ ಹೋದರೆಂದೂ', ಪಾಠ್ಯಕ್ರಮಗಳಲ್ಲಿ ಸೇರಿಸಲಾಗಿದೆ.

ದೆಹಲಿಯಲ್ಲಿನ ಶಾಲೆಗಳ ಆರನೇ ತರಗತಿಗೆ ಇಟ್ಟಿರುವ 'ಪ್ರಾಚೀನ ಭಾರತ' ಎಂಬ ಪಾಠ್ಯಪುಸ್ತಕದಲ್ಲಿ 'ವೈದಿಕಯುಗದಲ್ಲಿನ ಜೀವನ' ಎಂಬ ಶೀರ್ಷಕೆಯಡಿಯಲ್ಲಿ ಕೆಳಕಂಡ ವಿಷಯವನ್ನು ಕೊಡಲಾಗಿದೆ:—

"ಮೊದಲಿಗೆ ಆರ್ಯರು ಭಾರತದಲ್ಲಿ ಪಾದಾರ್ಪಣ ಮಾಡಿದಾಗ ಇಲ್ಲಿ ವಾಸಿಸುವ ಸಲುವಾಗಿ ಭೂಮಿಯನ್ನು ಪಡೆಯಲು, ಇವರಿಗಿಂತ ಮೊದಲೇ ಇಲ್ಲಿ ನೆಲೆಸಿದ್ದವರೊಡನೆ ಹೋರಾಡಬೇಕಾಯಿತು. ಈ ಜನರನ್ನು ಆರ್ಯರು ದಸ್ಯು ಅಥವಾ ದಾಸರೆಂದು ಕರೆಯುತ್ತಿದ್ದರು. ಆರ್ಯರು ಗೌರವರ್ಣ ದವರಾಗಿದ್ದು, ದಸ್ಯುಗಳು ಕಪ್ಪುಬಣ್ಣ, ಹಾಗೂ ಚಪ್ಪಟೆ ಮೂಗುಳ್ಳವ ರಾಗಿದ್ದರು. ಆರ್ಯರು ಪೂಜಿಸುತ್ತಿದ್ದ ದೇವತೆಗಳನ್ನು ದಸ್ಯುಗಳು ಪೂಜಿ ಸುತ್ತಿರಲಿಲ್ಲ. ದಸ್ಯುಗಳ ಭಾಷೆ ಆರ್ಯರಿಗೆ ತಿಳಿಯುತ್ತಿರಲಿಲ್ಲ. ಆರ್ಯರು ಸಂಸ್ಕೃತ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆರ್ಯರು ಯುದ್ಧದಲ್ಲಿ ದಸ್ಯುಗಳನ್ನು ಪರಾಜಿತಗೊಳಿಸಿ, ಅವರೊಡನೆ ದಯಾಭಾವದಿಂದ ವರ್ತಿಸದೇ, ಅವರಲ್ಲನೇಕರನ್ನು ದಾಸರನ್ನಾಗಿ ಮಾಡಿಕೊಂಡರು. ಇದರಿಂದಾಗಿ, ದಸ್ಯುಗಳು ಆರ್ಯರ ಸೇವೆ ಮಾಡಬೇಕಾಗಿದ್ದಿತು. ಮತ್ತು ಕಠಿಣ, ಹಾಗೂ ನೀಚ ಕಾರ್ಯಗಳನ್ನು ಅವರು ಮಾಡಬೇಕಾಗುತ್ತಿತ್ತು.

ಈ ರೀತಿ ಜನತೆಯಲ್ಲಿ ಹರಡಿದ ಅಂತಃಕಲಹದ ಪರಿಣಾಮವಾಗಿ ಉತ್ತರ ಮತ್ತು ದಕ್ಷಿಣ ಎಂಬ ಭೇದಭಾವ ಬೆಳೆಯಿತು. ಇಷ್ಟಲ್ಲದೇ, ಮೇಲುಜಾತಿ–ಕೀಳುಜಾತಿ, ಅನುಸೂಚಿತ ಜಾತಿ–ಅನುಸೂಚಿತ ಜನಜಾತಿ, ಹಾಗೂ ಪರಿಗಣಿತಜಾತಿ ಮುಂತಾದ ಹೆಸರುಗಳಿಂದ ಕರೆದು, ಪರಸ್ಪರ ವಿರೋಧ, ತಿರಸ್ಕಾರ, ಹಾಗೂ ದ್ವೇಷಾಸೂಯೆಗಳ ಭಾವನೆಗಳನ್ನು ಅವರಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಳೆಸಲಾಯಿತು. ಇಂದು ಭಾರತದ ವಿಕತೆಗೆ, ಅಖಿಂಡತೆಗೆ, ಹಾಗೂ ಇತರ ಅನೇಕ ಸಮಸ್ಯೆಗಳಿಗೆ ಆರ್ಯರು ವಿದೇಶೀಯರೆಂಬ ಮಿಥ್ಯಾಭಾವನೆಯೇ ಪ್ರಮುಖ ಕಾರಣವಾಗಿದೆ.

ದೇಶವು ಸ್ವತಂತ್ರವಾದ ನಲವತ್ತು ವರ್ಷಗಳ ನಂತರವೂ, ನಾವು ಇನ್ನೂ ಅದೇ ತಪ್ಪು ಭಾವನೆಯನ್ನೇ ತಾಳಿರುವುದು ಆಶ್ಚರ್ಯ, ಹಾಗೂ ದುಃಖಿದ ವಿಷಯವಾಗಿದೆ. ಅದರ ದುಷ್ಪರಿಣಾಮಗಳು ಅನೇಕ ರೂಪ ಗಳಲ್ಲಿ ಈಗ ನಮ್ಮ ಮುಂದಿವೆ. ಎರಡುನೂರು ವರ್ಷಗಳ ಹಿಂದೆ ಬಂದ ಆಂಗ್ಲರನ್ನು ವಿದೇಶೀಯರೆಂದು ಪರಿಗಣಿಸಿದಲ್ಲಿ ಮೂರು ಸಾವಿರ ವರ್ಷಗಳ ಹಿಂದೆ ಬಂದ ಆರ್ಯರನ್ನು ವಿದೇಶೀಯರೆಂದು ಪರಿಗಣಿಸಬಾರದೇಕೆ?, ಎಂದು ಹೇಳಲಾಗುತ್ತಿದೆ. ಆಂಗ್ಲರು ಈ ದೇಶವನ್ನು ಬಿಟ್ಟು ಹೋದ ರೀತಿಯಲ್ಲಿಯೇ, ಆಕ್ರಮಣಕಾರರಾಗಿ ಈ ದೇಶಕ್ಕೆ ಬಂದ ಸುಮಾರು ಆರವತ್ತು ಕೋಟಿ ಆರ್ಯರೂ ಕೂಡ ಈ ದೇಶವನ್ನು ಬಿಟ್ಟುಹೋಗಿ, ದೇಶದ ಆಡಳಿತ ವನ್ನು ಈ ದೇಶದ ಮೂಲ ನಿವಾಸಿಗಳಾದ ಆದಿವಾಸಿಗಳಿಗೆ ವಹಿಸಿದ ದಿನವೇ ದೇಶ ಸ್ವತಂತ್ರವಾಯಿತೆಂದು ತಿಳಿದುಕೊಳ್ಳಲಾಗುತ್ತದೆಂದೂ ಹೇಳಲಾಗುತ್ತಿದೆ.

ಈ ದೇಶದ ಜನರ ಪೈಕಿ ಮುಸಲ್ಮಾನರಾಗಿ, ಹಾಗೂ ಕ್ರಿಶ್ಚಿಯನ್ನ ರಾಗಿ ಮತಾಂತರಗೊಂಡಿರುವವರಲ್ಲನೇಕರು ಅನುಸೂಚಿತ ಜಾತಿ, ಹಾಗೂ ಅನುಸೂಚಿತ ಜನಜಾತಿಗಳಿಗೆ, ಗಿರಿಜನ, ಮತ್ತು ಇತರ ಸಣ್ಣ–ಪುಟ್ಟ ಜಾತಿ ಗಳಿಗೆ ಸೇರಿರುವವರಾದ್ದರಿಂದ, ಹಿಂದೂಗಳಿಗಿಂತ ಮುಸಲ್ಮಾನರಾಗಿ ಹಾಗೂ, ಕ್ರಿಶ್ಚಿಯನ್ನರಾಗಿ ಮತಾಂತರಗೊಂಡಿರುವವರೇ ಈ ದೇಶದ ನ್ಯಾಯವಾದ ಒಡೆಯರಾಗಿದ್ದು, ಉಳಿದವರು ವಿದೇಶೀಯರೆಂದು ಹೇಳಲಾಗುತ್ತಿದೆ. ಆಂಗ್ಲರು ಭಾರತವನ್ನು ಬಿಟ್ಟು ಹೋದರಾದರೂ, ಎಲ್ಲರಿಗಿಂತ ಮೊದಲಿಗೆ ಈ ದೇಶದ ಮೇಲೆ ಆಕ್ರಮಣ ನಡೆಸಿ, ಇನ್ನೂ ಇಲ್ಲಿಯೇ ಉಳಿದಿರುವ ಆರ್ಯರನ್ನು ಇಲ್ಲಿಂದ ಓಡಿಸಬೇಕಾಗಿದೆಯೆಂದೂ ಹೇಳಲಾಗುತ್ತಿದೆ. ಈ ಸಂದರ್ಭದಲ್ಲಿ 1985ನೇ ಮಾರ್ಚ್ 27ರ "ಮುಸ್ಲಿಂ ಇಂಡಿಯಾ" ಸಂಚಿಕೆಯಲ್ಲಿನ ಲೇಖನವನ್ನು ಉದಾಹರಿಸುವುದು ಸೂಕ್ತವಾಗಿದೆ :—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

"ಈ ಭಾರತದೇಶ ಮೊದಲೇ ವಾಸವಾಗಿದ್ದ ಇಲ್ಲಿನ ಮೂಲನಿವಾಸಿಗಳಿಗೆ ಸೇರಿದ್ದು, ಆವರೇ ಇದರ ನ್ಯಾಯವಾದ ಹಕ್ಕುದಾರರು. ವಿಶ್ವದ ಅತ್ಯಂತ ಪ್ರಾಚೀನ ನಾಗರಿಕತೆಯಿಂದ ಕೂಡಿದ್ದ ಹಡಪ್ಪಾ, ಹಾಗೂ ಮೋಹನ್ ಜೋ ದಡೋ ನಗರಗಳನ್ನು ನಿರ್ಮಿಸಿದವರೂ ಆವರೇ! ಭಾರತದ ಮುಸಲ್ಮಾನರು, ಮತ್ತು ಕ್ರಿಶ್ಚಿಯನ್ನರುಗಳಲ್ಲನೇಕರು ಈ ದೇಶದ ಮೂಲ ನಿವಾಸಿಗಳಿಂದ ಮತಾಂತರಗೊಂಡಿದ್ದು, ಆವರು ದಲಿತರು ಅಥವಾ ಗಿರಿಜನರಾಗಿದ್ದಾರೆ. ಈ ಜನರೇ ಎಲ್ಲ ವಿದೇಶೀ ಆಕ್ರಮಣಗಳಿಂದ ಭಾರತವನ್ನು ರಕ್ಷಿಸಿದ್ದಾರೆ. ಆರ್ಯರು ಭಾರತಕ್ಕೆ ಸೇರಿದವರಲ್ಲವಾದ್ದರಿಂದ, ಇವರಿಗೆ ಭಾರತದ ಬಗ್ಗೆ ವಿಶ್ವಾಸವಿಲ್ಲ. ಆವರು ವಿದೇಶಿಯರಾಗಿದ್ದು, ಒಳಗಿನ ಶತ್ರುಗಳಾಗಿದ್ದಾರೆ. ಭಾರತಕ್ಕೆ ಪ್ರಪ್ರಥಮವಾಗಿ ಬಂದ ಈ ಆರ್ಯರೇ ವಿದೇಶೀಯರು. ಮುಸಲ್ಮಾನರು, ಮತ್ತು ಕ್ರಿಶ್ಚಿಯನ್ನರು ವಿದೇಶೀಯರಾಗಿ ಭಾರತವನ್ನು ಬಿಟ್ಟುಹೋಗಬೇಕಾಗಿದ್ದರೆ, ಮೊಟ್ಟ ಮೊದಲಿಗೆ ಭಾರತಕ್ಕೆ ವಿದೇಶೀಯರಾಗಿ ಬಂದ ಆರ್ಯರು ಭಾರತವನ್ನು ಬಿಟ್ಟು ಹೋಗಬೇಕಾದ್ದು ಆವರ ಆದ್ಯಕರ್ತವ್ಯ. ಮೊದಲಿಗೆ ಬಂದವರು ಮೊದಲು ಬಿಟ್ಟುಹೋಗಬೇಕು."

ರಾಷ್ಟ್ರಪತಿಯವರ ಮೂಲಕ ಮನೋನೀತರಾಗಿದ್ದ ಸದಸ್ಯ ಫ್ರಾಂಕ್ ಆಂಥೋಣಿ ಆವರು ಸಂಸತ್ತಿನಲ್ಲಿ 1977ನೇ ಸೆಪ್ಟಂಬರ್ 4ರಂದು-"ವಿದೇಶೀ ಆಕ್ರಮಣಕಾರರಾದ ಆರ್ಯರು ಈ ದೇಶಕ್ಕೆ ತಂದ ವಿದೇಶೀ ಭಾಷೆಯಾದ ಸಂಸ್ಕೃತ ಭಾಷೆಯನ್ನು ಸಂವಿಧಾನದ 8ನೇ ಪಟ್ಟಿಯಲ್ಲಿ ಸೂಚಿಸಿರುವ ಭಾರತೀಯ ಭಾಷೆಗಳ ಪಟ್ಟಿಯಿಂದ ತೆಗೆದು ಹಾಕಬೇಕು", ಎಂಬ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಇದು 1977ನೇ ಸೆಪ್ಟಂಬರ್ 5ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

1978ನೇ ಇಸವಿಯ ಪ್ರಾರಂಭದಲ್ಲಿ ಭಾರತ ತನ್ನ ಪ್ರಪ್ರಥಮ ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿಸಿತು. ಅದಕ್ಕೆ ಭಾರತದ ಪ್ರಾಚೀನ ವೈಜ್ಞಾನಿಕ ಆರ್ಯಭಟನ ಹೆಸರನ್ನು ಇಡಲಾಯಿತು. ಈ ಸಂದರ್ಭದಲ್ಲಿ 1978ನೇ ಫೆಬ್ರುವರಿ 23ರಂದು ದ್ರವಿಡ ಮುನ್ನೇತ್ರ ಕಳಗಂನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರತಿನಿಧಿ ಶ್ರೀ ಲಕ್ಷ್ಮಣನ್ ಭಾರತೀಯ ಉಪಗ್ರಹದ ಹೆಸರನ್ನು, ವಿದೇಶೀ ಹೆಸರಾದ 'ಆರ್ಯಭಟ', ಎಂದು ಇಡಬಾರದಾಗಿತ್ತು, ಎಂದು ಸೂಚಿಸಿದ್ದರು.

ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಸೇಲಂ ಎಂಬ ನಗರದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀರಾಮನು ಆರ್ಯನಾದುದರಿಂದ, ಜನರು ಶ್ರೀರಾಮನಮೂರ್ತಿಯ ಕುತ್ತಿಗೆಗೆ ಪಾದರಕ್ಷೆಗಳ ಹಾರವನ್ನು ಹಾಕಿ, ಪೊರಕೆಗಳಿಂದ ಮೂರ್ತಿಗೆ ಹೊಡೆಯುತ್ತಾ, ನಗರದ ಬೀದಿ–ಬೀದಿಗಳಲ್ಲಿ ಮೆರವಣಿಗೆ ನಡೆಸಿದ್ದರು.

ಋಷಿಗಳು ಕ್ರಾಂತದರ್ಶಿಗಳಾಗಿರುತ್ತಾರೆ. ಮೊಟ್ಟಮೊದಲಿಗೆ **ಋಷಿ ದಯಾನಂದರು** ಮೇಲ್ಕಂಡ ತಪ್ಪು ಗ್ರಹಿಕೆಯ ವಿರುದ್ಧ ದನಿ ಏರಿಸಿದರು. 'ಆರ್ಯರು ಈರಾನಿನಿಂದ ಬಂದವರೆಂದೂ, ಮತ್ತು ಇಲ್ಲಿಯ ವರೊಡನೆ ಹೋರಾಡಿ, ಜಯ ಗಳಿಸಿ, ಅವರನ್ನು ಹೊರದೂಡಿ, ಈ ದೇಶದ ಒಡೆಯರಾದರೆಂದೂ, ಯಾವುದೇ ಸಂಸ್ಕೃತ ಗ್ರಂಥದಲ್ಲಾಗಲೀ, ಇತಿಹಾಸ ದಲ್ಲಾಗಲೀ, ಸೂಚಿಸದಿರುವಾಗ ವಿದೇಶೀಯರ ಈ ಪೊಳ್ಳುವಾದವನ್ನು ಹೇಗೆ ಒಪ್ಪುವುದು.' ಎಂದು ಅವರು ಘೋಷಿಸಿದರು.*

ಇದೇ ವಿಷಯವನ್ನು ಪಾಶ್ಚಾತ್ಯ ವಿದ್ವಾಂಸ ಮ್ಯೂರ್ ನಿಷ್ಪಕ್ಷ ಪಾತವಾಗಿ ಹೀಗೆ ಹೇಳಿದ್ದಾರೆ—

"ನನಗೆ ತಿಳಿದಿರುವಂತೆ, ಆರ್ಯರು ವಿದೇಶದಿಂದ ಬಂದ ಬಗ್ಗೆ ಯಾವುದೇ ಸಂಸ್ಕೃತ ಗ್ರಂಥದಲ್ಲಾಗಲೀ ಅಥವಾ ಇತರ ಯಾವುದೇ, ಎಷ್ಟೇ ಪ್ರಾಚೀನ ಗ್ರಂಥದಲ್ಲಾಗಲೀ ಯಾವ ಉಲ್ಲೇಖವೂ ದೊರಕುವುದಿಲ್ಲವೆಂದು ನಿಷ್ಪಕ್ಷಪಾತವಾಗಿ ಒಪ್ಪಿಕೊಳ್ಳುತ್ತೇನೆ. ಋಗ್ವೇದದಲ್ಲಿ ಬರತಕ್ಕ **ದಾಸ**, ಮತ್ತು **ಅಸುರ** ಶಬ್ದಗಳು ಅನಾರ್ಯರನ್ನು ಅಥವಾ ಭಾರತದ ಮೂಲ ನಿವಾಸಿಗಳನ್ನುದ್ದೇಶಿಸಿ, ಹೇಳಿರುವ ಬಗ್ಗೆ ಯಾವ ಪ್ರಮಾಣವೂ

---

* **ಸತ್ಯಾರ್ಥಪ್ರಕಾಶ**, ಎಂಟನೆಯ ಸಮುಲ್ಲಾಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೊರಕುವುದಿಲ್ಲ", ಎಂದು ಮ್ಯೂರ್ ಆವರು ತಮ್ಮ "ಓರಿಜಿನಲ್ ಸಂಸ್ಕೃಟ್ ಟೆಕ್ಸ್ಟ್ಸ್" ಸಂಪುಟ 2ರಲ್ಲಿ ತಿಳಿಸಿದ್ದಾರೆ.

ವಿಶ್ವವಿಖ್ಯಾತ ಇತಿಹಾಸತಜ್ಞರಾದ ಎಲ್ಫಿನ್ಸ್ಟನ್ ಆವರ ಪ್ರಕಾರ ಋಷಿ ದಯಾನಂದರ ಘೋಷಣೆಗೆ ಮಾನ್ಯತೆ ದೊರೆತಿದೆ. ಆವರು ತಮ್ಮ "ಹಿಸ್ಟರಿ ಆಫ್ ಇಂಡಿಯಾ"ದ ಸಂಪುಟ 1ರಲ್ಲಿ ತಿಳಿಸಿರುವುದೇನೆಂದರೆ :—

"ಮನುಸ್ಮೃತಿಯಲ್ಲಿ, ವೇದಗಳಲ್ಲಿ ಮತ್ತು ಮನುಸ್ಮೃತಿಗಿಂತ ಪ್ರಾಚೀನವಾದ ಇತರ ಅನ್ಯಗ್ರಂಥಗಳಲ್ಲಿಲ್ಲಿಯೂ, (ಭಾರತಕ್ಕೆ ಬರುವುದಕ್ಕೆ ಮೊದಲು), ಆರ್ಯರು ಭಾರತದ ಹೊರಗಿನ ಯಾವ ದೇಶದಲ್ಲಾಗಲೀ ವಾಸಿಸುತ್ತಿದ್ದ ಬಗ್ಗೆ ಪ್ರತ್ಯಕ್ಷ ಪುರಾವೆ ಯಾವುದೂ ಇರುವುದಿಲ್ಲ," ಎಂದು ತಿಳಿಸಿದ್ದಾರೆ.

ಆರ್ಯರು ಭಾರತದ ಹೊರಗಿನಿಂದ ಬಂದವರು, ಹಾಗೂ ಕೋಲರು, ದ್ರವಿಡರು, ಭಿಲ್ಲರು, ಸಂಥಾಲರೇ ಮೊದಲಾದ ಆದಿವಾಸಿಗಳೇ ಭಾರತದ ಮೂಲನಿವಾಸಿಗಳು, ಎಂಬುದಾಗಿ ಪ್ರಪ್ರಥಮವಾಗಿ "ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾ"ದಲ್ಲಿ ತಿಳಿಸಲಾಗಿತ್ತು. ನಂತರ, ಈ ವಿಷಯವನ್ನು ಪ್ರಚಾರ ಮಾಡುವ ಸಲುವಾಗಿ ಬನಾರಸ್ ಮತ್ತು ಲಾಹೋರ್‌ಗಳನ್ನು ಪ್ರಚಾರ ಕೇಂದ್ರಗಳನ್ನಾಗಿ ಮಾಡಲಾಯಿತು. ಬನಾರಸ್ಸಿನಲ್ಲಿ ಟಿ. ಎಚ್. ಗ್ರಿಫಿತ್ ಆವರನ್ನು ಬನಾರಸ್ ಕಾಲೇಜಿನ ಪ್ರಿನ್ಸಿಪಾಲರಾಗಿಯೂ, ಲಾಹೋರಿನಲ್ಲಿ ಓರಿಯಂಟಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ಎ. ಸಿ. ಬುಲ್ನರ್ ಅವರನ್ನು ನಿಯೋಜಿಸಲಾಯಿತು. ಈ ಕಾಲೇಜುಗಳಲ್ಲಿ ಸಂಸ್ಕೃತದಲ್ಲಿ ಎಂ. ಎ. ಮಾಡುವ ವಿದ್ಯಾರ್ಥಿಗಳನ್ನು ಉನ್ನತ (ವಿಶೇಷವಾಗಿ ಬ್ರಾಹ್ಮಣ). ವಿದ್ಯಾರ್ಥಿವೇತನದೊಡನೆ ಆಕ್ಸ್‌ಫೋರ್ಡ್‌ಗೆ ಕಳುಹಿಸಲಾಗುತ್ತಿತ್ತು. ಅಲ್ಲಿಂದ ಶಿಕ್ಷಣ ಪಡೆದು, ಸ್ವದೇಶಕ್ಕೆ ಹಿಂದಿರುಗುವವರನ್ನು ಅಲ್ಲಲ್ಲಿ ಪ್ರಿನ್ಸಿಪಾಲರನ್ನಾಗಿಯೂ ಅಥವಾ ಉನ್ನತ ದರ್ಜೆಯ ಪ್ರೊಫೆಸರನ್ನಾಗಿಯೂ ಮಾಡಲಾಗುತ್ತಿತ್ತು. ಲಾಹೋರ್, ಹಾಗೂ ಬನಾರಸ್‌ಗಳಲ್ಲಿಯೂ ಆಕ್ಸ್‌ಫೋರ್ಡ್‌ನಲ್ಲಿದ್ದ ರೀತಿಯಲ್ಲಿಯೇ ಪಠ್ಯಕ್ರಮವನ್ನು ಯೋಜಿಸಲಾಗಿದ್ದಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೈದಿಕಧರ್ಮದ ಮೂಲವನ್ನು ಎಲ್ಲಿಯವರೆಗೆ ಹುಡಿಮಾಡಲು ಸಾಧ್ಯವಾಗುವುದಿಲ್ಲವೋ, ಅಲ್ಲಿಯವರೆಗೆ ತಮ್ಮ ಉದ್ದೇಶ ಸಫಲವಾಗುವುದಿಲ್ಲವೆಂದು ಆಂಗ್ಲರಿಗೆ ಅನುಭವವಾಗಿದ್ದಿತು. ಇದಕ್ಕಾಗಿ ಅವರು ವೈದಿಕ ಸಾಹಿತ್ಯವನ್ನು ವಿರೂಪಗೊಳಿಸಿ, ಪ್ರಚಾರಮಾಡುವ ಅವಶ್ಯಕತೆಯನ್ನು ಮನಗಂಡರು. ಈ ಉದ್ದೇಶಕ್ಕಾಗಿಯೇ ಕರ್ನಲ್ ಬೋಡನ್ ಎಂಬ ವ್ಯಕ್ತಿ ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯಕ್ಕೆ ಭಾರೀ ಪ್ರಮಾಣದ ಹಣವನ್ನು ನೀಡಿದ್ದನು.

ಭಾರತೀಯರಲ್ಲದ್ದಿದ್ದಾಗ್ಯೂ, ವಿದೇಶೀ ವಿದ್ವಾಂಸರು ಸಂಸ್ಕೃತ ಸಾಹಿತ್ಯದ ಬಗ್ಗೆ, ಅದರಲ್ಲೂ ವಿಶೇಷವಾಗಿ, ವೈದಿಕ ವಾಙ್ಮಯದ ಬಗ್ಗೆ ಅನುಕರಣೀಯ ಉದ್ಯೋಗ ನಡೆಸಿದ್ದು ನಿಜ! ಆದರೆ, ಮತೀಯ ಒಲವು, ಹಾಗೂ ಶಾಸ್ತ್ರೀಯ ಪಾಂಡಿತ್ಯದ ಬಗ್ಗೆ ಹೆಚ್ಚು ಪರಿಶ್ರಮ ವಹಿಸಿ, ಅಭ್ಯಾಸ ಮಾಡಿ, ಸರಿಯಾದ ಜ್ಞಾನವನ್ನು ಪಡೆದುಕೊಳ್ಳುವ ಕಾರಣದಿಂದಾಗಿ, ವೈದಿಕ ಸಾಹಿತ್ಯವನ್ನು ಅದರ ಯಥಾರ್ಥರೂಪದಲ್ಲಿ ಪ್ರಸ್ತುತ ಪಡಿಸಲು ಅವರಿಗೆ ಸಾಧ್ಯವಾಗಲಿಲ್ಲ. ವಿದೇಶೀಯರು ಯಾವ ಧ್ಯೇಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಸಾಹಿತ್ಯದ ಬಗ್ಗೆ ಇಷ್ಟು ಅಗಾಧ ಪರಿಶ್ರಮ ನಡೆಸಿದರೋ, ಆ ಬಗ್ಗೆ ಮೋನಿಯರ್ ವಿಲಿಯಮ್ಸ್, ತನ್ನ ಸಂಸ್ಕೃತ–ಇಂಗ್ಲೀಷ್ ಶಬ್ದಕೋಶದ ಭೂಮಿಕೆಯಲ್ಲಿ ಕೆಳಕಂಡಂತೆ ತಿಳಿಸಿದ್ದಾನೆ :—

"ಭಾರತ ದೇಶೀಯರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಲು ತನ್ನ ಜನರಿಗೆ ಅನುಕೂಲ ಮಾಡಿಕೊಡುವ ಸಲುವಾಗಿಯೇ, ಭಾರತೀಯ ಧರ್ಮ ಗ್ರಂಥಗಳನ್ನು ಆಂಗ್ಲಭಾಷೆಗೆ ಭಾಷಾಂತರಿಸಲು ಅನುಕೂಲ ಮಾಡುವಂತಹ ವಿಶೇಷ ಉದ್ದೇಶದಿಂದಲೇ ಇದನ್ನು ಧಾರಾಳ ಕೊಡುಗೆಯಾಗಿ ಅವನು ಬಿಟ್ಟು ಹೋಗಿದ್ದಾನೆ".

ಎಂದರೆ, ಬೋಡನ್‌ನ ಟ್ರಸ್ಟ್‌ನ ಮೂಲಕ ಸಂಸ್ಕೃತ ಗ್ರಂಥಗಳನ್ನು ಆಂಗ್ಲಭಾಷೆಗೆ ಅನುವಾದಿಸಿ, ಭಾರತೀಯರನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಲು ಅವನ ದೇಶವಾಸಿಗಳಿಗೆ ಸಹಾಯವಾಗಲೆಂದೇ, ಅವನು ಈ ಕ್ರಮ ಕೈಗೊಂಡನೆಂದು ಭಾವಿಸಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

1861ರಲ್ಲಿ ಪ್ರಕಟವಾದ **ಮೋನಿಯರ್ ವಿಲಿಯಮ್ಸ್‌ನ** 'ಭಾರತದಲ್ಲಿ ಧರ್ಮಪ್ರಚಾರ ಕಾರ್ಯಕ್ಕೆ ನೆರವಾಗುವುದಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಭಾಷೆಯ ಅಧ್ಯಯನ' (**ದಿ ಸ್ಟಡಿ ಆಫ್ ಸಾನ್ಸ್‌ಕ್ರಿಟ್ ಇನ್ ರಿಲೇಷನ್ ಟು ಮಿಷನರಿ ವರ್ಕ್ ಇನ್ ಇಂಡಿಯಾ**) ಎಂಬ ಗ್ರಂಥದಲ್ಲಿ ಅವನು ಕೆಳಕಂಡಂತೆ ತಿಳಿಸಿದ್ದಾನೆ :—

"ಹಿಂದೂ ಧರ್ಮದ ಭದ್ರಕೋಟೆಯ ಗೋಡೆಗಳನ್ನು ಸುತ್ತುವರಿದು, ಅವುಗಳನ್ನು ಶಿಥಿಲಗೊಳಿಸಿ, ಕಡೆಗೆ ಶಿಲುಬೆಯ ಸೈನಿಕ (ಕ್ರೈಸ್ತಧರ್ಮ ಪ್ರಚಾರಕ)ರಿಂದ ಧ್ವಂಸಗೊಳಿಸಿದ ನಂತರ, ಕ್ರೈಸ್ತಧರ್ಮ ಪೂರ್ಣ ಜಯ ಗಳಿಸಲೇಬೇಕು."

ಎಂದರೆ, ಹಿಂದೂ ಧರ್ಮವನ್ನು ನಾಶಮಾಡಿ ಕ್ರೈಸ್ತ ಧರ್ಮದ ಪತಾಕೆಯನ್ನು ಹಾರಿಸುವ ಸಲುವಾಗಿಯೇ **ಮೋನಿಯರ್** ವಿಲಿಯಮ್ಸ್‌ನ ಪೂರ್ಣ ಪರಿಶ್ರಮವಾಗಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಲಾರ್ಡ್ ಮೆಕಾಲೇ ನಿಯೋಜಿಸಿದ್ದ ವಿದೇಶೀ ಸಂಸ್ಕೃತ ವಿದ್ವಾಂಸರ ಪೈಕಿ **ಪ್ರೊಫೆಸರ್ ಮ್ಯಾಕ್ಸ್‌ಮೂಲರ್** ಸರ್ವೋತ್ತಮನೆಂದು ತಿಳಿಯಲಾಗಿತ್ತು. ವೇದಗಳ ಸಂಶೋಧನೆ ಮತ್ತು ಅನುವಾದ ಕಾರ್ಯದಲ್ಲಿ ತೊಡಗಿರುವ ಕಾರಣ, ಮತ್ತು ಉದ್ದೇಶ್ಯಗಳೇನೆಂಬ ಬಗ್ಗೆ ಅವನು ತನ್ನ ಪತ್ನಿಗೆ ಬರೆದಿರುವ ಪತ್ರದಿಂದ ಸ್ಪಷ್ಟವಾಗುತ್ತದೆ :—

"ನನ್ನ ಈ ಗ್ರಂಥ, ಹಾಗೂ ವೇದಾನುವಾದ, ಇನ್ನು ಮುಂದೆ ಭಾರತದ ವಿನಾಶ ಹೇಗಾಗುವುದೆಂಬುದನ್ನೂ, ಬಹುದೂರದವರೆಗೆ ಹೇಗೆ ಪ್ರಸರಿಸುತ್ತದೆಂಬುದನ್ನೂ, ತಿಳಿಸುತ್ತದೆ. ವೇದಗಳು ಅವರ ಧರ್ಮದ ಮೂಲವಾದ್ದು, ಆ ಮೂಲ ಹೇಗಿದೆಯೆಂಬುದನ್ನು ಈಗ ಅವರಿಗೆ ತಿಳಿಸುವ ಸಲುವಾಗಿ, ಕಳೆದ ಮೂರು ಸಹಸ್ರ ವರ್ಷಗಳಿಂದ ವೇದಗಳಿಂದ ತಿಳಿದು ಬಂದಿರುವ ವಿಚಾರವನ್ನು ಮೂಲ ಸಹಿತ ತೊಡೆದುಹಾಕುವುದೊಂದೇ ಏಕಮಾತ್ರ ಉಪಾಯವೆಂಬುದು ನನ್ನ ಧೃಡ ನಿಶ್ಚಯ."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಲೈಫ್ ಎಂಡ್ ಲೆಟರ್ಸ್ ಆಫ್ ಫ್ರೆಡರಿಕ್ ಮ್ಯಾಕ್ಸ್‌ಮೂಲರ್ ಸಂಪುಟ–1, ಅಧ್ಯಾಯ–15, ಪುಟ–34).

ಎಂದರೆ, ಈ ಗ್ರಂಥದ ಸಂಸ್ಕರಣ, ಹಾಗೂ ವೇದಾನುವಾದ ಭಾರತದ ಭಾಗದ ಮೇಲೆ ಬಹುದೂರದವರೆಗೆ ಪ್ರಭಾವ ಬೀರಿಸಿ, ವೇದಗಳಿಂದ ಮೂರು ಸಹಸ್ರ ವರ್ಷದಿಂದ ತಿಳಿದು ಬಂದಿರುವ ವಿಚಾರಧಾರೆಯನ್ನು ಬೇರು ಸಹಿತ ತೊಡೆದು ಹಾಕುವುದೇ, ಅವನ ಏಕಮಾತ್ರ ಉದ್ದೇಶ್ಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

1838ನೇ ಡಿಸಂಬರ್ 16 ರಂದು ಭಾರತದ ಸಚಿವರ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ) ಹೆಸರಿಗೆ ಬರೆದ ತನ್ನ ಪತ್ರದಲ್ಲಿ ಮ್ಯಾಕ್ಸ್ ಮೂಲರ್ ಈ ರೀತಿ ಬರೆದಿದ್ದಾನೆ :—

"ಭಾರತದ ಪ್ರಾಚೀನಧರ್ಮ ಈಗ ನಾಶವಾಗಿದೆ. ಈಗ ಕ್ರೈಸ್ತ ಧರ್ಮ ಆ ಸ್ಥಾನವನ್ನು ಆಕ್ರಮಿಸದಿದ್ದಲ್ಲಿ, ಅದಕ್ಕೆ ತಪ್ಪಿತಸ್ಥರಾರು?", ಎಂದು ಮೇಲ್ಕಂಡ ಅವನ ಗ್ರಂಥದ ಪ್ರಥಮ ಸಂಪುಟದ 16ನೇ ಅಧ್ಯಾಯದ 378ನೇ ಪುಟದಲ್ಲಿ ಕೇಳಿದ್ದಾನೆ.

ಮ್ಯಾಕ್ಸ್‌ಮೂಲರನ ಈ ಪ್ರಯತ್ನವನ್ನು ಪ್ರಶಂಸಿಸಿ, ಅವನ ಆಪ್ತ ಸ್ನೇಹಿತ ಮಿ॥ ಇ. ಬಿ. ಪುಸೆ, ತನ್ನ ಪತ್ರದಲ್ಲಿ—"ನಿನ್ನ ಈ ಪ್ರಯತ್ನ ಭಾರತೀಯರನ್ನು ಕ್ರೈಸ್ತಧರ್ಮಿಯರನ್ನಾಗಿ ಮತಾಂತರಗೊಳಿಸುವಲ್ಲಿ ನವಯುಗವನ್ನು ನಿರ್ಮಾಣ ಮಾಡುತ್ತದೆ," ಎಂದು ಬರೆದಿದ್ದಾನೆ.

ಭಾರತೀಯರಲ್ಲಿ ಅವರ ಪ್ರಾಚೀನ ಸಾಹಿತ್ಯ, ಇತಿಹಾಸ, ಸಂಸ್ಕೃತಿ ಮತ್ತು ಸಭ್ಯತೆಗಳ ಬಗ್ಗೆ ಅಶ್ರದ್ಧೆ, ಹಾಗೂ ತಿರಸ್ಕಾರ ಭಾವನೆಗಳನ್ನು ಮೂಡಿಸುವುದೇ ಆಂಗ್ಲರ, ಮತ್ತು ಆಂಗ್ಲ ಶಿಕ್ಷಣದ ಉದ್ದೇಶ್ಯವಾಗಿದ್ದಿತು. ವೇದಗಳ ಬಗ್ಗೆ ಅವರಲ್ಲಿ ಮೂಡಿದ್ದ ಅಭಿಪ್ರಾಯಗಳ ಮೂಲಕ ಅವರು ವೇದಗಳನ್ನು ಕಾಡು ಕುರುಬರ ಹಾಡು ಅಥವಾ ಕಾಡು ಮನುಷ್ಯರ ಪ್ರಲಾಪ, ಎಂದು ತಿಳಿಸಿದುದಲ್ಲದೇ, ಭಾರತೀಯರ ನಡುವೆ ಆಂತಃಕಲಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ಬಿತ್ತಿ, ದೇಶದ ಏಕತೆ ಮತ್ತು ಅಖಂಡತೆಗೆ ಆಘಾತವನ್ನುಂಟು ಮಾಡುವುದರಲ್ಲಿ ಸಫಲರಾದರು. ಅವರ ಯೋಜನಾಬದ್ಧ ಪ್ರಯತ್ನದ ಪರಿಣಾಮವಾಗಿ, ಭಾರತೀಯ ವಿದ್ವಾಂಸರೂ ಸಹ ಕ್ರಮಕ್ರಮವಾಗಿ ಪ್ರಭಾವಕ್ಕೊಳಗಾದರಲ್ಲದೇ, ಪಾಶ್ಚಾತ್ಯ ವಿಚಾರಧಾರೆಯ ಪ್ರಸಾರ, ಹಾಗೂ ಪ್ರಚಾರದಲ್ಲಿ ಸಹಾಯಕರಾದರು. ಮತ್ತು ಆಂಗ್ಲರ ಅಭಿಪ್ರಾಯವನ್ನೇ ಇವರೂ ಅನುಕರಿಸತೊಡಗಿದರು.

ವಿದ್ವಾಂಸರೂ, ಹಾಗೂ ಮಹಾನ್ ದೇಶಭಕ್ತರೂ ಆದ **ಲೋಕಮಾನ್ಯ ಬಾಲಗಂಗಾಧರ** ತಿಲಕರಂಥವರೂ ಕೂಡ ಈ ತಪ್ಪು ಗ್ರಹಿಕೆಗೆ ಬಲಿಯಾದರು. ಅವರೂ ಕೂಡ—'ಆರ್ಯರು ವಿದೇಶೀ ಆಕ್ರಮಣಕಾರರೆಂದೂ, ಉತ್ತರಧ್ರುವದಿಂದ ಬಂದವರೆಂದೂ' ತಿಳಿಸಿದರು. ಸುಮಾರು ಹತ್ತುಸಾವಿರ ವರ್ಷಗಳ ಹಿಂದೆ, ಉತ್ತರ ಧ್ರುವದಲ್ಲಿ ಹಿಮದ ಬಿರುಗಾಳಿ ಎದ್ದ ಕಾರಣದಿಂದಾಗಿ, ಅವರು ಅಲ್ಲಿಂದ ಓಡಿ ಬಂದು, ಯೂರೋಪ್, ಮಧ್ಯ ಏಷ್ಯಾ, ಈರಾನ್, ಹಾಗೂ ಭಾರತಗಳಲ್ಲಿ ನೆಲೆಸಿದರೆಂಬುದು ಅವರ ಅಭಿಪ್ರಾಯ. ಈ ಬಗ್ಗೆ ಬಂಗಾಳದ ಪ್ರಸಿದ್ಧ ವಿದ್ವಾಂಸರಾದ **ಉಮೇಶಚಂದ್ರ ವಿದ್ಯಾರತ್ನ** ಅವರು **ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು** ಪೂನಾದಲ್ಲಿ ಭೇಟಿಮಾಡಿ, ಚರ್ಚಿಸಿದ ಬಗ್ಗೆ **"ಮಾನವೇರ್ ಆದಿ ಜನ್ಮಭೂಮಿ"** (ಪುಟ 124) ಎಂಬ ಅವರ ಗ್ರಂಥದಲ್ಲಿ—"ನಾನು ಮೂಲವೇದವನ್ನು ಓದಿಲ್ಲ. ಪಾಶ್ಚಾತ್ಯ ವಿದ್ವಾಂಸರ ಅನುವಾದವನ್ನು ಮಾತ್ರ ಓದಿದ್ದೇನೆ", ಎಂದು **ತಿಲಕ** ಮಹೋದಯರು ಸ್ಪಷ್ಟವಾಗಿ ಹೇಳಿದರು, ಎಂದು ಬರೆದಿದ್ದಾರೆ.

ಉತ್ತರ ಧ್ರುವದ ವಿಷಯದ ಬಗ್ಗೆ ತಮ್ಮ ಭಾವನೆಯನ್ನು ವ್ಯಕ್ತಪಡಿಸುತ್ತಾ **ತಿಲಕ** ಮಹೋದಯರು—"ಉತ್ತರ ಧ್ರುವದಲ್ಲಿ ಸೋಮರಸವನ್ನು ರಾತ್ರಿಕಾಲದಲ್ಲಿ ತೆಗೆದು, ಶುದ್ಧಮಾಡಲಾಗುತ್ತಿತ್ತು," ಎಂದು ಬರೆದಿದ್ದಾರೆ.

ಇದನ್ನು ವಿರೋಧಿಸಿ, **ನಾರಾಯಣ ಭವಾನಿ ಪಾವಗೀ** ಅವರು ತಮ್ಮ **"ಆರ್ಯಾವರ್ತಾಂತೀಲ್ ಆರ್ಯಾಂಚೀ ಜನ್ಮಭೂಮಿ"**, ಎಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥದಲ್ಲಿ—"ಉತ್ತರ ಧ್ರುವದಲ್ಲಿ ಸೋವಲತೆ ಕಂಡುಬರುವುದೇ ಇಲ್ಲ. ಇದು ಹಿಮಾಲಯ ಶ್ರೇಣಿಯ ಒಂದು ಭಾಗವಾದ ಮುಂಜವಾನ್ ಪರ್ವತದಲ್ಲಿ ಬೆಳೆಯುತ್ತದೆ", ಎಂದು ತಿಳಿಸಿದ್ದಾರೆ.

ಆರ್ಯರು ಉತ್ತರ ಧ್ರುವದಿಂದ ಈರಾನಿಗೂ, ಅಲ್ಲಿಂದ ಭಾರತಕ್ಕೂ ಬಂದರೆಂದು ತಿಲಕ್ ಅವರು ತಿಳಿಸಿದ್ದಾರೆ. ಆದರೆ, ಆರ್ಯರು ಭಾರತದಿಂದ ಬಂದು, ಈರಾನಿನಲ್ಲಿ ನೆಲೆಸಿದರೆಂಬುದಾಗಿ ಈರಾನಿನ ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ತೆಪರಾನ್ ಹಿಜ್ರಿ 1309ರ "ಜುಗ್ರಾಫಿಯಾ ಪಂಜ್ ಕಿತಾ ಬನಾಮ್ ತದ್‌ರೀಸ್ ದರ್‌ಸಾಲ್ ಪಂಜುಮ್"ನಲ್ಲಿ—"ಆರ್ಯರು ಕೆಲವು ಸಹಸ್ರ ವರ್ಷಗಳ ಹಿಂದೆ, ಹಿಮಾಲಯದಿಂದ ಬಂದು, ಈರಾನಿನ ನೀರು ಮತ್ತು ಹವಾಮಾನ ಹಿತಕರವಾಗಿದ್ದುದರಿಂದ ಅಲ್ಲಿ ನೆಲೆಸಿದರು", ಎಂಬುದಾಗಿ ಹೇಳಲಾಗಿದೆ.

'ಈಗಿನ ಟಿಬೆಟ್ಟಿನಲ್ಲಿ ಸೃಷ್ಟಿ ಪ್ರಾರಂಭವಾಗಿದ್ದು, ಅಲ್ಲಿಂದಲೇ ಆರ್ಯರು ಅತ್ತ-ಇತ್ತ ಹೊರಟರೆಂಬ'* ಸ್ವಾಮೀ ದಯಾನಂದ ಸರಸ್ವತಿ ಅವರ ವಾದಕ್ಕೆ ಇದರಿಂದ ಪುಷ್ಟಿ ದೊರಕುತ್ತದೆ.

ಈರಾನಿನ ಬಾದಶಹರು ತಮ್ಮ ಹೆಸರಿನ ಮುಂದೆ, 'ಆರ್ಯಮೆಹರ್', ಎಂಬ ಉಪಾಧಿಯನ್ನು ಸದಾ ಹಾಕಿಕೊಳ್ಳುತ್ತಿದ್ದಾರೆ. ಫಾರಸೀ ಭಾಷೆಯಲ್ಲಿ ಮೆಹರ್, ಎಂದರೆ ಸೂರ್ಯ. ಈರಾನೀಯರು ತಾವು ಸೂರ್ಯವಂಶೀಯರು ಎಂದು ಪರಿಗಣಿಸುತ್ತಿದ್ದಾರೆ. ಆದರೆ, ಮತಾಂಧತೆಯ ಕಾರಣದಿಂದಾಗಿ, ಇತ್ತೀಚೆಗೆ ಇದರಲ್ಲಿ ಬದಲಾವಣೆ ಕಂಡುಬರುತ್ತಿದೆ.

ರಾಜಕೀಯ ದೃಷ್ಟಿಯಿಂದ ನೋಡಿದಲ್ಲಿ, ದೇಶ ಸ್ವತಂತ್ರವಾದ ನಂತರವೂ, ಭಾರತೀಯರು ಪಾಶ್ಚಾತ್ಯ ವಿದ್ವಾಂಸರ ಮಾನಸಪುತ್ರರಂತೆ, ಅವರು ಹಾಕಿದ ಕನ್ನಡಕವನ್ನೇ ಧರಿಸುತ್ತಾ, ಅವರನ್ನೇ ಅನುಕರಿಸುತ್ತಿದ್ದಾರೆ. ಭಾರತೀಯ ಸಂಸ್ಕೃತಿಯ ಮಹಾನ್ ಪ್ರತಿಪಾದಕರಾದ ಕೆ. ಎಂ. ಮುನ್ಶಿ

*ಸತ್ಯಾರ್ಥ ಪ್ರಕಾಶ, ಅಷ್ಟಮ ಸಮುಲ್ಲಾಸ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರು ತಮ್ಮ 'ಲೋಪಾಮುದ್ರಾ' ಗ್ರಂಥದಲ್ಲಿ ಪ್ರಾಚೀನ ಆರ್ಯರ ಬಗ್ಗೆ—

"ಇವರ ಭಾಷೆಯಲ್ಲಿ ಅನಾಗರಿಕರ ಗುಣವನ್ನು ಕಾಣಬಹುದು. ಅವರು ಮಾಂಸವನ್ನು ತಿನ್ನುತ್ತಿದ್ದರಲ್ಲದೇ, ಗೋಮಾಂಸವನ್ನೂ ತಿನ್ನುತ್ತಿದ್ದರು. ಗೋಮಾಂಸವನ್ನು ಉಣ್ಣಿಸುತ್ತಿದ್ದವರಿಗೆ ಬಹುಮಾನರೂಪವಾಗಿ 'ಅತಿಥಿಗ್ವ' ಎಂಬ ವಿಶಿಷ್ಟ ಉಪಾಧಿಯನ್ನು ನೀಡುತ್ತಿದ್ದರು. ಋಷಿಗಳು ಸೋಮರಸವನ್ನು ಕುಡಿದು, ಉನ್ಮತ್ತರಾಗಿ ಲೋಭ–ಕ್ರೋಧಗಳನ್ನು ಪ್ರದರ್ಶಿಸುತ್ತಿದ್ದರು. ಅವರು ಜೂಜಾಡುತ್ತಿದ್ದರು. ಸಾಮಾನ್ಯ ಜನರು ಸಾಧಾರಣ ಸುರೆಯನ್ನು ಕುಡಿದು ಉನ್ಮತ್ತರಾಗುತ್ತಿದ್ದರು.

"ಋಷಿಗಳು ಯುದ್ಧಕ್ಷೇತ್ರದಲ್ಲಿ ಸಾವಿರಾರು ಜನರ ಸಂಹಾರ ಮಾಡುತ್ತಿದ್ದರು. ರೂಪವತೀ ಸ್ತ್ರೀಯರನ್ನು ಆಕರ್ಷಿಸಲು ಅವರು ಮಂತ್ರಗಳನ್ನು ರಚಿಸುತ್ತಿದ್ದರು. ವಿವಾಹವಾಗದ ಕನ್ಯೆಯರಿಂದ ಹುಟ್ಟಿದ ಮಕ್ಕಳನ್ನು ಅಧಮ, ಹಾಗೂ ಪತಿತರೆಂದು ಪರಿಗಣಿಸುತ್ತಿರಲಿಲ್ಲ. ಅನೇಕ ಋಷಿಗಳ ತಂದೆಗಳು ಯಾರೆಂಬುದು ತಿಳಿದಿರಲಿಲ್ಲ.

"ಆರ್ಯರು ತೋಳಗಳಂತೆ ಲೋಭಿಗಳಾಗಿದ್ದರು. ಕ್ರೌರ್ಯ, ಹಾಗೂ ಅಶ್ಲೀಲತೆಗಳ ಬಗ್ಗೆ ಚಿಂತಿಸುತ್ತಿರಲಿಲ್ಲ. ಆತ್ಮದ ಬಗ್ಗೆ ಯಾರಿಗೂ ಯೋಚನೆಯೇ ಇರಲಿಲ್ಲ. ಪರಮಾತ್ಮನ ಕಲ್ಪನೆ, ವಿಶ್ವಾಸ ಮತ್ತು ಚಿಂತನೆಯ ಬಗ್ಗೆ ಪರಿಗಣನೆ ಇರಲಿಲ್ಲ. ಸ್ವದೇಶದ ಬಗ್ಗೆ ಕಲ್ಪನೆಯೂ ಇರಲಿಲ್ಲ.

"ದಸ್ಯುಗಳು ಶಿವಲಿಂಗ ಪೂಜಕರಾಗಿದ್ದು, ಅವರೇ ಭಾರತದ ಮೂಲ ನಿವಾಸಿಗಳು", ಎಂದು ಬರೆದಿದ್ದಾರೆ.

ತಮ್ಮ 'ಲೋಪಾಮುದ್ರಾ' ಗ್ರಂಥದ ಭೂಮಿಕೆಯಲ್ಲಿ ಬರೆಯುತ್ತಾ ಶ್ರೀ ಮುನ್ಶಿಯವರು ತಾವು—'ಈ ಗ್ರಂಥದಲ್ಲಿ ಬರೆದಿರುವ ವಿಷಯಗಳೆಲ್ಲವನ್ನೂ ಋಗ್ವೇದದ ಆಧಾರದ ಮೇಲೆಯೇ ಬರೆದಿರು'ವುದಾಗಿ ತಿಳಿಸಿದ್ದಾರೆ. ಅವರ ಗ್ರಂಥಕ್ಕೆ ಉಪಯೋಗಿಸಿಕೊಂಡಿರುವ ಆಧಾರ ಗ್ರಂಥದಲ್ಲಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಬಂಧಪಟ್ಟ ಮಂತ್ರಗಳನ್ನು ಉದಾಹರಿಸುವಂತೆ ಕೋರಿ, ಪತ್ರಬರೆದುದಕ್ಕೆ ಉತ್ತರವಾಗಿ 1950ನೇ ಫೆಬ್ರುವರಿ 2ರಂದು ಬರೆದ ಪತ್ರದಲ್ಲಿ ಅವರು --

"ನಮ್ಮ ಸಂಸ್ಕೃತಿಯ ಪ್ರಾರಂಭಿಕ ಸಮಯದಲ್ಲಿ ವೇದಗಳನ್ನು ಮಾನವರು ರಚಿಸಿರುವರೆಂಬುದನ್ನು ನಾನು ನಂಬುತ್ತೇನೆ. ಪಾಶ್ಚಾತ್ಯ ವಿದ್ವಾಂಸರ ವೇದಾನುವಾದ, ವಿಶೇಷತಃ ಡಾ॥ ಕೀಥ್ ಅವರ 'ವೇದಿಕ್ ಇಂಡೆಕ್ಸ್' ಗ್ರಂಥದಲ್ಲಿನ ವಾತಾವರಣವನ್ನೇ ನನ್ನ ಗ್ರಂಥದಲ್ಲಿ ಮೂಡಿಸಲು ಪ್ರಯತ್ನಿಸಿದ್ದೇನೆ. ಆ ಕಾಲದ ಜನ-ಜೀವನ, ಆಚಾರ-ವಿಚಾರ ಮೊದಲಾದವುಗಳ ಬಗ್ಗೆ ಪಾಶ್ಚಾತ್ಯ ವಿದ್ವಾಂಸರ ವೇದಾನುವಾದವನ್ನು ಆಧಾರಗ್ರಂಥವೆಂದು ನಾನು ಸ್ವೀಕರಿಸಿದ್ದೇನೆ", ಎಂದು ಬರೆದಿದ್ದಾರೆ.

ಸಾಯಣ ಮತ್ತು ಅವರ ನಂತರದ ಭಾರತೀಯ, ಹಾಗೂ ಪಾಶ್ಚಾತ್ಯ ವಿದ್ವಾಂಸರು ನೈರುಕ್ತ ಪ್ರಕ್ರಿಯೆಯ ಆಧಾರದ ಮೇಲೆ ವೇದಾರ್ಥವನ್ನು ಮಾಡದೇ, ಲೌಕಿಕ ಸಂಸ್ಕೃತದ ಆಧಾರದ ಮೇಲೆ ವೇದಾರ್ಥ ಮಾಡಿದ ದುಷ್ಪರಿಣಾಮವಾಗಿ ಸಭ್ಯಸಂಸಾರದ ಎದುರಿಗೆ ಮುಖತೋರಿಸುವ ಯೋಗ್ಯತೆಯನ್ನು ನಾವು ಕಳೆದುಕೊಂಡಂತಾಗಿದೆ. ನಿರುಕ್ತದ ಆಧಾರದ ಮೇಲೆ ವೇದಗಳಿಗೆ ಯೌಗಿಕ ಅರ್ಥವನ್ನು ಮಾಡದೇ, ಲೋಕಾಚಾರದ ಅರ್ಥವನ್ನು ಮಾಡಿ, ಮನೋರಂಜಕ, ಹಾಗೂ ಕಟ್ಟುಕಥೆಗಳನ್ನು ಬರೆಯುವ ರೀತಿಯಲ್ಲಿ ಬರೆದು, ನಮ್ಮ ಮಸ್ತಿಷ್ಕಗಳಲ್ಲಿ ವೇದಗಳ ಬಗ್ಗೆ ಅಶ್ರದ್ಧೆಯ ಕಲ್ಲುಬಂಡೆಗಳನ್ನು ನಿಲ್ಲಿಸಿದಂತೆ ಮಾಡಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವೇದಗಳಲ್ಲಿ ಇತಿಹಾಸವಿಲ್ಲ

ವೇದಗಳು ತ್ರಿಕಾಲಗಳಿಂದ ಬಾಧಿತವಾಗದಿರುವುದರಿಂದ, ಅವುಗಳಲ್ಲಿನ ಆಂತಃಸಾಕ್ಷಿಯನ್ನು ಪರಿಗಣಿಸಿ, ವೇದಗಳಲ್ಲಿ ಯಾವುದೇ ಐತಿಹಾಸಿಕ ವರ್ಣನೆ ಇದೆ, ಎಂದು ಸಾಧಿಸಲಾಗುವುದಿಲ್ಲ. ಅಂತೆಯೇ ವೇದಗಳಲ್ಲಿ ದೊರಕುವ ಒಂದೆರಡು ಸಾಂದರ್ಭಿಕ ಶಬ್ದಗಳ ಆಧಾರದ ಮೇಲೆ ತರ್ಕಬದ್ಧ ನಿರ್ಣಯವನ್ನು ಮಾಡಲೂ ಸಾಧ್ಯವಾಗುವುದಿಲ್ಲ. ವೇದಗಳಲ್ಲಿ ಬರತಕ್ಕ ಕೆಲವು ನಕ್ಷತ್ರಗಳ ನಿರ್ದಿಷ್ಟ ಸ್ಥಾನವನ್ನು ಆಧಾರವಾಗಿಟ್ಟುಕೊಂಡು, ಲೋಕಮಾನ್ಯ ತಿಲಕ್ ಅವರು ವೇದಗಳ ಕಾಲವನ್ನು ನಿಶ್ಚಯಿಸಿ, ಋಗ್ವೇದದ 10ನೇ ಮಂಡಲದ 86ನೇ ಸೂಕ್ತದಲ್ಲಿ ವಸಂತಸಂಪಾತ ಬಿಂದು* ಮೃಗಶಿರಾ ನಕ್ಷತ್ರದಲ್ಲಿ ಬರುವ ವರ್ಣನೆ ಇರುವುದಾಗಿ, ಅವರ 'ಓರಾಯನ್' ಗ್ರಂಥದಲ್ಲಿ ಬರೆದಿದ್ದಾರೆ :—

"ಮೃಗಶಿರಾ ನಕ್ಷತ್ರ ಉತ್ತರಾ ಭಾದ್ರಪದಾ ನಕ್ಷತ್ರದಿಂದ ಆರು ನಕ್ಷತ್ರಗಳ ಹಿಂದೆ ಇದೆ. ವಸಂತಸಂಪಾತ ಬಿಂದು ಒಂದು ನಕ್ಷತ್ರದಿಂದ ಮತ್ತೊಂದು ನಕ್ಷತ್ರಕ್ಕೆ ಚಲಿಸಬೇಕಾದಲ್ಲಿ 960 ವರ್ಷ ತಗಲುತ್ತದೆ. ಇದಕ್ಕನುಸಾರ, ಇಂದಿಗೆ ಸುಮಾರು 6,000 ವರ್ಷ(960 × 6)ಗಳ ಹಿಂದೆ ಪ್ರಾಯಶಃ ಮೃಗಶಿರಾ ನಕ್ಷತ್ರದಲ್ಲಿ ವಸಂತಸಂಪಾತ ಬಿಂದು ಬಂದಿರ ಬಹುದು. ಈ ಸೂಕ್ತದಿಂದ ವೇದಗಳ ರಚನಾಕಾಲ ಲಭ್ಯವಾಗುತ್ತದೆ".

ಈ ತರ್ಕ ಸರಿಯೆಂದು ಕಂಡುಬರಬಹುದಾದರೂ, ಸ್ವಲ್ಪ ಗಹನವಾಗಿ ಯೋಚಿಸಿದಲ್ಲಿ ಈ ತರ್ಕ ಪೊಳ್ಳೆಂಬುದು ಸ್ಪಷ್ಟವಾಗುತ್ತದೆ. ಒಟ್ಟು 27

---

*ಸಂಪಾತ ಬಿಂದು = ಸೂರ್ಯನು ವಿಷುವದ್ವೃತ್ತವನ್ನು, ಹಾಗೂ ಕ್ರಾಂತಿವೃತ್ತವನ್ನು ಹಾಯ್ದು ಹೋಗುವ ಬಿಂದುಗಳನ್ನು ಮೇಷ ಸಂಕ್ರಾಂತಿ ಬಿಂದು ಮತ್ತು ತುಲಾ ಸಂಕ್ರಾಂತಿ ಬಿಂದುಗಳೆಂದು ಕರೆಯಲಾಗಿದೆ—ಅನುವಾದಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಕ್ಷತ್ರಗಳಿದ್ದು, ಮೇಲ್ಕಂಡಂತೆ ನಕ್ಷತ್ರಗಳ ಚಲನೆಯ ಅವಧಿಯನ್ನು ಗಣನೆಗೆ ತೆಗೆದುಕೊಂಡಾಗ, $960 \times 27 = 25,920$ ವರ್ಷಗಳ ನಂತರ, ವಸಂತಸಂಪಾತ ಬಿಂದು ಕ್ರಾಂತಿವೃತ್ತವನ್ನು ಸುತ್ತಿ, ತನ್ನ ಮೂಲಸ್ಥಾನಕ್ಕೆ ಬಂದು ಸೇರುತ್ತದೆ. ಒಂದು ವೇಳೆ, ಕ್ರಿಸ್ತಪೂರ್ವ 6,000 ವರ್ಷಗಳ ಹಿಂದೆ ಮೃಗಶಿರಾ ನಕ್ಷತ್ರದಲ್ಲಿ ವಸಂತಸಂಪಾತ ಬಿಂದು ಬಂದಿದ್ದಲ್ಲಿ, ಅದರಿಂದ 26,000 ವರ್ಷ ಮೊದಲೇ, ಎಂದರೆ ಇಂದಿನಿಂದ ಸುಮಾರು 32,000 ವರ್ಷ ಮೊದಲೂ ಸಹ ಅದೇ ನಕ್ಷತ್ರದಲ್ಲಿತ್ತು. ಅದಕ್ಕೆ 26,000 ವರ್ಷಗಳ ಹಿಂದೆಯೂ ಮೃಗಶಿರಾ ನಕ್ಷತ್ರದಲ್ಲಿ ವಸಂತಸಂಪಾತ ಬಿಂದು ಬಂದಿದ್ದಿರಬೇಕು. ಸೃಷ್ಟಿಯ ನಂತರದ 200 ಕೋಟಿ ವರ್ಷಗಳ* ಅವಧಿಯಲ್ಲಿ ಇಂತಹ ಪರಿಸ್ಥಿತಿ ಅನೇಕ ಬಾರಿ ಉದ್ಭವಿಸಿರಬಹುದು.

ಪ್ರತಿ ಏಳು ದಿನಗಳ ನಂತರ, ಸೋಮವಾರ ಬರುತ್ತದೆ. ಏಳು ದಿನಗಳ ನಂತರ ಸೋಮವಾರ ಬರುತ್ತದೆ, ಎನ್ನುವ ಬದಲು ಒಂದು ವಾರದ ಹಿಂದೆ ಸೋಮವಾರ ಇದ್ದಿತು, ಎಂದು ಹೇಳಬಾರದೇಕೆ, ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹೀಗೆಯೇ, ಒಂದು ತಿಂಗಳ ಹಿಂದೆ, ಒಂದು ವರ್ಷದ ಹಿಂದೆ, ಅಥವಾ ಒಂದು ನೂರು ವರ್ಷಗಳ ಹಿಂದೆ ಸೋಮವಾರ ಬಂದಿರಲಿಲ್ಲವೇ ? ವೇದಗಳಲ್ಲಿ ವರ್ಣಿಸಲಾಗಿರುವ ಈ ನಕ್ಷತ್ರ-ಸ್ಥಿತಿ ಇಂದಿನಿಂದ 6,000 ವರ್ಷಗಳ ಹಿಂದಿನದಾಗಿದ್ದು, ಅದಕ್ಕಿಂತ ಹಿಂದಿನದಲ್ಲವೆಂದು ಭಾವಿಸಲು ಕಾರಣ ದೊರೆಯುವುದಿಲ್ಲ. ಅಂದಿನಿಂದ 20 ಸಹಸ್ರ (26000-6000) ವರ್ಷಗಳ ನಂತರ, ವಸಂತಸಂಪಾತ ಬಿಂದು ಮತ್ತೆ ಮೃಗಶಿರಾ ನಕ್ಷತ್ರದಲ್ಲಿ ಬರಬಹುದು. ಆಗ, ಅಲ್ಲಿಂದ ಐದುನೂರು ವರ್ಷಗಳ ನಂತರ ಜನಿಸುವ ವಿದ್ವಾಂಸರು ಇದೇ ತರ್ಕದ ಆಧಾರದ ಮೇಲೆ ವೇದಗಳು ಅಲ್ಲಿಂದ ಕೇವಲ

---

*ಆರಿಜೋನಾ ವಿಶ್ವವಿದ್ಯಾನಿಲಯದ ವಿಜ್ಞಾನಿಗಳಾದ ಪ್ರೊ. ನಾಗಿ, ಹಾಗೂ ಪ್ರೊ. ಜುಮ್‌ಬರ್ಗ್ ಅವರುಗಳು 2,300 ದಶಲಕ್ಷಗಳಷ್ಟು ಹಿಂದಿನ ಜೀವ ಮತ್ತು ವಸ್ತುಗಳ ಅವಶೇಷಗಳನ್ನು ಪತ್ತೆಮಾಡಿದ್ದಾರೆ. ಜೋಹಾನ್ಸ್‌ಬರ್ಗ್‌ಗೆ ಉತ್ತರಕ್ಕೆ 320 ಕಿಲೋಮೀಟರುಗಳ ದೂರದಲ್ಲಿರುವ ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್ ಪ್ರದೇಶದಲ್ಲಿನ ಕಲ್ಲು ಬಂಡೆಗಳಲ್ಲಿ ಈ ಅವಶೇಷಗಳು ಪತ್ತೆಯಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಐದುನೂರು ವರ್ಷಗಳ ಹಿಂದೆ ಮಾತ್ರ ಇದ್ದವೆಂದು ಸಿದ್ಧಪಡಿಸಬಹುದು. ವಸ್ತುತಃ ವೇದಗಳಲ್ಲಿ ಬಂದಿರುವುದಾಗಿ ಹೇಳಲಾಗಿರುವ ಯಾವುದೇ ರೀತಿಯ ಐತಿಹಾಸಿಕ ಅಥವಾ ಭೌಗೋಳಿಕ ಸಂಕೇತಗಳು ಇಲ್ಲದಿರುವುದರಿಂದ, ಈ ಅಭಿಮತಗಳು ಕೇವಲ ಕಲ್ಪನಾತ್ಮಕಗಳಾಗಿವೆ.

ವೇದಗಳಲ್ಲಿ ಐತಿಹಾಸಿಕ ವ್ಯಕ್ತಿಗಳ, ಹಾಗೂ ಭೌಗೋಳಿಕ ಸ್ಥಳಗಳ ಹೆಸರುಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಓದಿದಾಗ ವೇದಗಳಲ್ಲಿ ಐತಿಹಾಸಿಕ ವ್ಯಕ್ತಿಗಳು, ಹಾಗೂ ಭೌಗೋಳಿಕ ಸ್ಥಳಗಳು, ಇವೆ ಎಂಬ ಭ್ರಮೆಯುಂಟಾಗುವುದು ಸಹಜ. ಆದರೆ, ಸಂದರ್ಭೋಚಿತವಾಗಿ, ಹಿಂದಿನ ಮತ್ತು ಮುಂದಿನ ಪದಗಳೊಡನೆ ಅವುಗಳ ಸಾಮಂಜಸ್ಯವನ್ನು ಸ್ಥಾಪಿಸಲು ಯತ್ನಿಸಿದಾಗ, ತಥ್ಯಗಳಿಗೆ ವಿರುದ್ಧವಾದುದರಿಂದ, ಅವುಗಳ ತಥಾಕಥಿತ ಐತಿಹಾಸಿಕತೆಯು ಲೋಪವಾಗಿಬಿಡುತ್ತದೆ. ಇದನ್ನು ಪುಷ್ಟಿಗೊಳಿಸುವ ಸಲುವಾಗಿ ಕೆಳಕಂಡ ಸಂದರ್ಭಗಳನ್ನು ಉದಾಹರಿಸಲಾಗಿದೆ :

1. ಅಥರ್ವವೇದ(13-3-26)ದಲ್ಲಿ—"**ಕೃಷ್ಣಾಯಾಃ ಪುತ್ರೋ ಅರ್ಜುನಃ**", ಎಂದಿದೆ. ಎಂದರೆ, ಸ್ಥೂಲದೃಷ್ಟಿಯಿಂದ ಈ ಮಂತ್ರದಲ್ಲಿ ಅರ್ಜುನನು ಕೃಷ್ಣೆ(ದ್ರೌಪದಿ)ಯ ಮಗನೆಂದು ವ್ಯಕ್ತವಾಗುವಂತೆ ತೋರುತ್ತದೆ. ಆದರೆ, ಮಹಾಭಾರತದ ಪ್ರಕಾರ ಅರ್ಜುನನು ದ್ರೌಪತಿಯ ಪತಿ. ಆದ್ದರಿಂದ, ಅಥರ್ವವೇದದಲ್ಲಿ ಅರ್ಜುನನು ದ್ರೌಪದಿಯ ಪತಿ, ಎಂದು ತಿಳಿಸಬೇಕಾಗಿತ್ತು. ಈ ಪದಗಳ ಯೌಗಿಕ ಅರ್ಥ ಮಾಡಿದಾಗ ಸ್ಥಿತಿ ಸ್ಪಷ್ಟವಾಗುವುದು.

ಶತಪಥ ಬ್ರಾಹ್ಮಣದಲ್ಲಿ—"ರಾತ್ರಿರ್ವೈ ಕೃಷ್ಣಾ ಅಸಾವಾದಿತ್ಯಸ್ತಸ್ಯಾ ವತ್ಸೋ ಅರ್ಜುನಃ"—ಎಂದರೆ, ರಾತ್ರಿಯನ್ನು ಕೃಷ್ಣಾ ಎಂದೂ, ರಾತ್ರಿಯಿಂದ ಉತ್ಪನ್ನವಾಗುವ ಸೂರ್ಯ ಅಥವಾ ದಿನವನ್ನು ಅರ್ಜುನ ಎಂದೂ, ವಿವರಿಸಲಾಗಿದೆ. ಆದ್ದರಿಂದ, ಅಥರ್ವವೇದದಲ್ಲಿ ಬಂದಿರುವ ಕೃಷ್ಣಾ ಮಹಾಭಾರತದ ದ್ರೌಪದಿಯಲ್ಲ. ಮತ್ತು ಅರ್ಜುನ ಮಹಾಭಾರತದ ಅರ್ಜುನನೆಂದು ಗ್ರಹಿಸಲಾಗದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2. ಋಗ್ವೇದ(6–9–1)ದ—"ಅಪಶ್ಚ ಕೃಷ್ಣಮಹರರ್ಜುನಂ ಚ", ಎಂಬಲ್ಲಿ ಕೃಷ್ಣ ಮತ್ತು ಅರ್ಜುನ ಒಬ್ಬನೇ ವ್ಯಕ್ತಿಯ ಹೆಸರಾಗಿದೆ. ಆದರೆ, ಇತಿಹಾಸ ಎಂದರೆ, ಮಹಾಭಾರತಕ್ಕನುಸಾರವಾಗಿ ಇವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳು. ವಾಸ್ತವವಾಗಿ ಇಲ್ಲಿ ಕೃಷ್ಣ ಮತ್ತು ಅರ್ಜುನ ಎರಡೂ, ದಿನದ ಹೆಸರಾಗಿವೆ.*

3. ಯಜುರ್ವೇದ(23–18)ದಲ್ಲಿ—ಅಂಬಾ, ಅಂಬಿಕಾ, ಅಂಬಾಲಿಕಾ-ಈ ಮೂರು ಹೆಸರುಗಳು ಒಟ್ಟಿಗೆ ಬಂದಿರುವುದನ್ನು ನೋಡಿ, ಭೀಷ್ಮನು ಅಪಹರಿಕೊಂಡುಹೋದ ಹುಡುಗಿಯರ ಹೆಸರುಗಳೇ ಇವೆಂದು, ಹೇಳಲಾಗುತ್ತಿದೆ. ಆದರೆ, ಯಜುರ್ವೇದದಲ್ಲಿ ಅವರನ್ನು ಕಾಂಪೀಲವಾಸಿನೀ ಅಥವಾ ಕಾಂಪೀಲವಾಸಿಗಳು ಎಂದು ಹೇಳಲಾಗಿದೆ. ಆದರೆ, ಮಹಾಭಾರತದಲ್ಲಿ ಅವರನ್ನು ಕಾಶೀರಾಜನ ಕನ್ಯೆಯರೆಂದು ಸೂಚಿಸಲಾಗಿದೆ. ವಾಸ್ತವಿಕವಾಗಿ ಈ ಶಬ್ದಗಳು ತಾಯಿ, ಅಜ್ಜಿ, ಹಾಗೂ ಮುತ್ತಜ್ಜಿ–ಈ ವಾಚಕರೂಪದಲ್ಲಿ ಬಂದಿವೆ. ಆದರೆ, ಯಜುರ್ವೇದದ(12–76 ಅಥವಾ 3–57)ದಲ್ಲಿ, ಹಾಗೂ ಆಯುರ್ವೇದದಲ್ಲಿ ಇವುಗಳು ಔಷಧಿಗಳ ಹೆಸರುಗಳಾಗಿವೆ.

ಭೌಗೋಳಿಕ ಸಂಕೇತಗಳನ್ನು ಸೂಚಿಸುವ ಪದಗಳಿಗೂ ಇದು ಅನ್ವಯಿಸುತ್ತದೆ. ಯಜುರ್ವೇದದ—

ಪಂಚನದ್ಯಃ ಸರಸ್ವತೀಮಪಿ ಯಂತಿ ಸಸ್ರೋತಸಃ ।
ಸರಸ್ವತೀ ತು ಪಂಚಧಾ ಸೋ ದೇಶೇऽಭವತ್ಸರಿತ್ ॥ (34–11)

ಈ ಮಂತ್ರದಲ್ಲಿ ಐದು ನದಿಗಳ ಉಲ್ಲೇಖವಿರುವುದರಿಂದ, ಇದನ್ನು ಪಂಜಾಬಿಗೆ ಅರ್ಥಾತ್ ಒಂದು ಪ್ರದೇಶಕ್ಕೆ ಸಂಬಂಧ ಕಲ್ಪಿಸಲಾಗಿದೆ. ಸರಸ್ವತೀ ನದಿ ಪಂಜಾಬಿನಲ್ಲಿ ಹರಿಯದಿರುವುದೂ, ಪಂಜಾಬಿನ ಐದು ನದಿಗಳು ಸರಸ್ವತೀ ನದಿಯಲ್ಲಿ ಸೇರದಿರುವುದೂ, ಸರಸ್ವತೀ ನದಿಯೇ ಐದು ಭಾಗವಾಗಿ ಹರಿಯದಿರುವುದೂ, ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

---

*ಎಂದರೆ, ದಿನದ ಹಗಲನ್ನು ಅರ್ಜುನನೆಂದೂ, ರಾತ್ರಿಯನ್ನು ಕೃಷ್ಣನೆಂದೂ ತಿಳಿಸಲಾಗಿದೆ.—ಅನುವಾದಕ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಸ್ತವವಾಗಿ ಈ ಮಂತ್ರದಲ್ಲಿ ಪಂಚಜ್ಞಾನೇಂದ್ರಿಯಗಳ ಮೂಲಕ ಪ್ರಾಪ್ತವಾಗುವ ಜ್ಞಾನದ ಅಥವಾ ಮನಸ್ಸಿನ ಐದು ವೃತ್ತಿಗಳ ಸ್ಮೃತಿಯನ್ನು ವಾಣಿಯ ಮೂಲಕ ಅನೇಕ ವಿಧದಲ್ಲಿ ವ್ಯಕ್ತಪಡಿಸುವ ಬಗ್ಗೆ ವರ್ಣಿಸಲಾಗಿದೆ.

ಇಮಂ ಮೇ ಗಂಗೇ ಯಮುನೇ ಸರಸ್ವತೀ ಶುತುದ್ರಿ
ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ
ಶೃಣುಹ್ಯಾ ಸುಷೋಮಯಾ ॥

[ಋಗ್ವೇದ 10-75-5]

ಮೇಲ್ಕಂಡ ಯಾವ ಋಗ್ವೇದ ಮಂತ್ರದ-ಆಧಾರದ ಮೇಲೆ ಆರ್ಯರು ಸಪ್ತಸಿಂಧು (ಏಳು ನದಿಗಳಿಂದ ಕೂಡಿದ) ದೇಶದಲ್ಲಿ ನೆಲೆಸಿದ್ದರೆಂಬ ಬಗ್ಗೆ ಕಲ್ಪನೆ ಮಾಡಲಾಗಿದೆಯೋ, ಆಲ್ಲಿ ಏಳು ನದಿಗಳ ಬದಲು ಹತ್ತು ನದಿಗಳ ಹೆಸರುಗಳನ್ನು ಕೊಡಲಾಗಿದೆ. ಹಿಮಾಲಯದಿಂದ ಗಂಗೆಯನ್ನು ಭಗೀರಥನು ಕೆಳಕ್ಕೆ ತರುವುದಕ್ಕೆ ಮೊದಲೇ, ವೇದಗಳು ಆಸ್ತಿತ್ವದಲ್ಲಿದ್ದವು. ಮುಂದಿನ ಮಂತ್ರದಲ್ಲೇ ಲಕ್ನೋ ನಗರದ ಬಳಿ ಹರಿಯುವ ಗೋಮತೀ ನದಿಯ ಹೆಸರೂ ಸಹ ಬಂದಿದ್ದು, ಗೋಮತೀ ನದಿಯನ್ನು ಹೊಸ ನದಿಗಳ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಆದ್ದರಿಂದ, ಈ ಶಬ್ದಗಳನ್ನು ನದಿಗಳಿಗೆ ಸಂಬಂಧಿಸಿದ್ದೆಂದು ಹೇಳುವುದಕ್ಕಾಗುವುದಿಲ್ಲ. ಈ ಮಂತ್ರಗಳ ಸಂಬಂಧ ಯಾವ ಭೌಗೋಳಿಕ ವರ್ಣನೆಯ ಜತೆಗೂ ಇಲ್ಲ. ವಾಸ್ತವವಾಗಿ, ಇಲ್ಲಿ ಇವು ಆಧ್ಯಾತ್ಮಿಕ ಧಾರೆಗಳಾಗಿದ್ದು, ಶರೀರದಲ್ಲಿನ ಇಡಾ-ಪಿಂಗಳಾದಿ ನಾಡಿಗಳ ವರ್ಣನೆಯಾಗಿರುತ್ತವೆ. ಕಾಲಾಂತರದಲ್ಲಿ ಈ ಮಂತ್ರಗಳಲ್ಲಿನ ಶಬ್ದಗಳನ್ನು ಆರಿಸಿಕೊಂಡು, ನದಿಗಳಿಗೆ ಹೆಸರನ್ನು ಕೊಡಲಾಯಿತು. ವೇದಗಳಲ್ಲಿನ ಹೆಸರುಗಳು ಪ್ರಪಂಚದಲ್ಲಿ ಬಳಕೆಗೆ ಬಂದಿವೆಯೇ ಹೊರತು, ಪ್ರಪಂಚದಲ್ಲಿನ ಹೆಸರುಗಳು ವೇದಗಳಲ್ಲಿ ಬಂದಿವೆಯೆಂಬುದು ಅಸಂಬದ್ಧ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇವೆಲ್ಲವನ್ನೂ ಬರೆಯುವುದಕ್ಕೆ ನಮ್ಮ ಅಭಿಪ್ರಾಯವಿಷ್ಟೇ! ಎಂದರೆ, ವೇದಗಳಲ್ಲಿ ಬಂದಿರುವ ಶಬ್ದಗಳು ಸ್ಥೂಲದೃಷ್ಟಿಯಿಂದ ಐತಿಹಾಸಿಕ ಅಥವಾ ಭೌಗೋಳಿಕ ಸಂಕೇತವಾಡುವ ಕಾರಣದಿಂದ, ಅವುಗಳ ಆಧಾರದ ಮೇಲೆ ಆರ್ಯರು ವಿದೇಶೀಯರೆಂದು ನಿಶ್ಚಯಮಾಡುವುದು ಯುಕ್ತಿಯುಕ್ತವಲ್ಲ.

ಕೆಲವು ವರ್ಷಗಳ ಹಿಂದೆ, ಯುನೆಸ್ಕೋ ಮೇಲ್ವಿಚಾರಣೆಯಲ್ಲಿ ನಡೆದ ಒಂದು ಅಂತರರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಭಾರತ ಸರ್ಕಾರವನ್ನು ಪ್ರತಿನಿಧಿಸಿದ್ದ ಏಳು ಜನರ ತಂಡವು—ಆರ್ಯರು ಈರಾನಿನಿಂದ ವಲಸೆಬಂದು ಭಾರತದಲ್ಲಿ ನೆಲೆಸಿದ್ದರೆಂಬ ಮಾನ್ಯತೆಯನ್ನು ಏಕಮತದಿಂದ ನಿರಾಕರಿಸಿದ್ದರು. ಈ ಸಂದರ್ಭದಲ್ಲಿ 'ಹಿಂದುಸ್ತಾನ್ ಟೈಮ್ಸ್' ಪತ್ರಿಕೆ ತನ್ನ 1977ನೇ ಅಕ್ಟೋಬರ್ 31ರ ಸಂಚಿಕೆಯಲ್ಲಿ ಪ್ರಕಟಿಸಿದ್ದ ಕೆಳಕಂಡ ವರದಿ ಅತ್ಯಂತ ಮಹತ್ವಪೂರ್ಣವಾದುದಾಗಿದೆ :—

"**ತಾಜಕಿಸ್ತಾನದ** ಸೋವಿಯತ್ ಗಣತಂತ್ರದ ರಾಜಧಾನಿಯಾದ ದಶಾಂಬೆಯಲ್ಲಿ ನಡೆದ ಅಂತರರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದ ಭಾರತೀಯ ಇತಿಹಾಸಕಾರರು, ಬಹುಭಾಷಾಪಂಡಿತರು, ಹಾಗೂ ಪ್ರಾಚ್ಯಶೋಧಕರು—ಆರ್ಯರು ಹೊರದೇಶದಿಂದ ಭಾರತಕ್ಕೆ ವಲಸೆಬಂದ ಬಗ್ಗೆ ನಿಶ್ಚಯಾತ್ಮಕ ಪುರಾವೆ ಇಲ್ಲವೆಂಬುದಾಗಿ ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತೀಯ ವಿದ್ವಾಂಸರು ಈ ವಿಷಯವನ್ನು ಮೇಲ್ಕಂಡ ವಿಚಾರಗೋಷ್ಠಿಯಲ್ಲಿ ಕರಾರುವಾಕ್ಕಾಗಿ ಪ್ರತಿಪಾದಿಸಿದ್ದು, ಅವರು ವಿಚಾರಗೋಷ್ಠಿಯಲ್ಲಿ ನಿರೂಪಿಸಿದ ಲೇಖನಗಳನ್ನು ಬಹಳವಾಗಿ ಶ್ಲಾಘಿಸಲಾಯಿತು, ಎಂಬುದಾಗಿ ಭಾರತದ ಪ್ರತಿನಿಧಿಗಳಲ್ಲೊಬ್ಬರಾದ, ಹಾಗೂ ರಾಷ್ಟ್ರೀಯ ಪುರಾತತ್ವವಸ್ತುಶಾಲೆಯ ನಿರ್ದೇಶಕರೂ ಆದ ಡಾ॥ ಎನ್. ಆರ್. ಬ್ಯಾನರ್ಜಿ ತಿಳಿಸಿದ್ದಾರೆ.

"ಕ್ರಿಸ್ತಪೂರ್ವ ಎರಡು ಸಾವಿರ ವರ್ಷಗಳ ಹಿಂದಿನ ಮಾನವಕುಲ ವಿಕಾಸಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಯುನೆಸ್ಕೋ ಆಶ್ರಯದಲ್ಲಿ ಈ ವಿಚಾರಗೋಷ್ಠಿಯನ್ನು ನಡೆಸಲಾಯಿತು. ಸೋವಿಯತ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಕ್ಕೂಟ, ಪಶ್ಚಿಮ ಜರ್ಮನಿ, ಈರಾಕ್, ಪಾಕಿಸ್ತಾನ ಮತ್ತು ಭಾರತ ದೇಶಗಳಿಂದ ತೊಂಬತ್ತು ಮಂದಿ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಏಳು ಮಂದಿಯ ಭಾರತೀಯ ಪ್ರತಿನಿಧಿಗಳ ತಂಡಕ್ಕೆ ಪ್ರೌಢವ್ಯಾಸಂಗದ ನಿರ್ದೇಶಕರಾದ ಪ್ರೊ॥ ಬಿ. ಬಿ. ಲಾಲ್ ಅವರು ನೇತೃತ್ವವಹಿಸಿದ್ದರು. ಭಾರತವ ವಿವಿಧ ಪ್ರಾಂತ ಮತ್ತು ವಿವಿಧ ಕಾಲಗಳಲ್ಲಿ ದೊರೆತ ಆರ್ಯರಿಗೆ ಸಂಬಂಧಿಸಿದ ಪ್ರಾಚ್ಯ ವಸ್ತುಗಳಿಗೂ, ಅಫ್ಘಾನಿಸ್ಥಾನ, ಈರಾನ್ ಮತ್ತು ಮಧ್ಯ ಏಷ್ಯಾಪ್ರಾಂತಗಳಲ್ಲಿ ದೊರೆತ ಆರ್ಯರ ಪ್ರಾಚೀನ ಅವಶೇಷಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದಾಗಿ ಭಾರತೀಯ ವಿದ್ವಾಂಸರು ವ್ಯಕ್ತ ಪಡಿಸಿದರು."

ಆರ್ಯರು ಹೊರಗಿನಿಂದ, ಎಂದರೆ ಈರಾನ್, ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾ ಪ್ರಾಂತಗಳಿಂದ ವಲಸೆ ಬಂದು ಭಾರತದಲ್ಲಿ ಬಲಾತ್ಕಾರವಾಗಿ ಅಧಿಕಾರ ವಹಿಸಿಕೊಂಡರೆಂಬ ಬಗ್ಗೆ ಪ್ರಾಚ್ಯವಸ್ತುಗಳ ಆಧಾರದ ಮೇಲೆ ಹೇಳುವ ಯಾವ ಪುರಾವೆಯೂ ದೊರಕುವುದಿಲ್ಲವೆಂಬುದೇ ಇದರ ತಾತ್ಪರ್ಯ.

ತದನಂತರ, ನಾವು ನಮ್ಮ ದೇಶದ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಪ್ರತಾಪಚಂದ್ರ ಮತ್ತು ಶ್ರೀ ಕೃಷ್ಣಚಂದ್ರ ಪಂತ—ಇಬ್ಬರನ್ನೂ ಭೇಟಿ ಮಾಡಿ, ಸರ್ಕಾರವೇ ಸ್ವತಃ ರಚಿಸಿದ್ದ ವಿದ್ವಾಂಸರ ಅಧಿಕೃತ ಪ್ರತಿನಿಧಿ ಮಂಡಲದ ಬಹುಪಾಲು ಸದಸ್ಯರೇ ಒಮ್ಮತದಿಂದ ಆರ್ಯರು ಹೊರಗಿನಿಂದ ಬಂದವರೆಂಬ ಭ್ರಾಂತಿಯನ್ನು ಅಲ್ಲಗಳೆದಿರುವುದರಿಂದ, ಇತಿಹಾಸ ಗ್ರಂಥಗಳಲ್ಲಿ, ಸರ್ಕಾರೀ ನಿರ್ದೇಶನಗಳಲ್ಲಿ, ಸಂವಿಧಾನ ಇತ್ಯಾದಿಗಳಲ್ಲಿ ಇರತಕ್ಕ ಆದಿವಾಸಿ, ಮೊದಲಾದ ಪದಗಳನ್ನೂ, ಹಾಗೂ ಆರ್ಯ ಮತ್ತು ದ್ರಾವಿಡ ಎಂಬ ಬಗ್ಗೆ ಇರತಕ್ಕ ಮತಭೇದಗಳನ್ನೂ ತೆಗೆದುಹಾಕುವಂತಹ ನಿಶ್ಚಿತ ಆದೇಶ ನೀಡಬೇಕಾದದ್ದು ಶಿಕ್ಷಣ ಮಂತ್ರಾಲಯ ಮತ್ತು ಗೃಹ ಮಂತ್ರಾಲಯ ದವರ ಕರ್ತವ್ಯವೆಂದು ತಿಳಿಸಿದ್ದೇವೆ.

ಆರ್ಯರು ಈ ದೇಶದ ಮೂಲನಿವಾಸಿಗಳಾಗಿದ್ದು, ಅವರಿಗಿಂತ ಮೊದಲು ಈ ದೇಶದಲ್ಲಿ ಯಾರೂ ವಾಸಿಸುತ್ತಿರಲಿಲ್ಲವೆಂಬ ಬಗ್ಗೆ ನಮ್ಮಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಾಕಷ್ಟು ಪುರಾವೆಗಳಿವೆ. ಈ ದೇಶಕ್ಕೆ ಪ್ರಥಮತಃ ಆರ್ಯಾವರ್ತವೆಂಬ ಪುರಾತನ ಹೆಸರಿದ್ದಿತು. ಮನುಷ್ಯರು ವಾಸಿಸುವ ಯಾವುದೇ ಭೂಖಂಡಕ್ಕೆ ಯಾವುದಾದರೂ ಒಂದು ಹೆಸರು ಅವಶ್ಯವಾಗಿ ಇದ್ದೇ ಇರುತ್ತದೆ. ಒಂದು ವೇಳೆ, ಆರ್ಯರು ಬರುವುದಕ್ಕೆ ಮೊದಲು ಇಲ್ಲಿ ದ್ರಾವಿಡರೇ ಮೊದಲಾದವರು ಯಾರಾದರೂ ವಾಸಿಸುತ್ತಿದ್ದ ಪಕ್ಷದಲ್ಲಿ, ಅವರ ಭಾಷಾಸಾಹಿತ್ಯದಲ್ಲಿ ಈ ದೇಶದ ಯಾವುದಾದರೂ ಹೆಸರು ಅವಶ್ಯವಾಗಿ ಇದ್ದೇ ಇರುತ್ತಿತ್ತು. ಈ ಬಗ್ಗೆ ಯಾವುದೇ ಸಂಕೇತ ದೊರಕದಿರುವುದರಿಂದಾಗಿ ಆರ್ಯರು ಈ ದೇಶದ ಆಕ್ರಮಣಕಾರರು, ಎಂಬ ವಾದದಲ್ಲಿ ಹುರುಳಿಲ್ಲ. ಇದೇ ಅಭಿಪ್ರಾಯ ವನ್ನೇ ವಿಶ್ವವಿಖ್ಯಾತ ಪ್ರಾಚ್ಯಶೋಧಕ ಟಿ. ಬರೋ ಅವರು, ಎ. ಎಲ್. ಭಾಷಮ್ ಅವರ ಸಂಪಾದಕತ್ವದಲ್ಲಿ ಆಕ್ಸ್‌ಫರ್ಡ್‌ನ ಕ್ಲಾರಂಡಾನ್ ಪ್ರೆಸ್ ನವರು 1975ರಲ್ಲಿ ಪ್ರಕಟಿಸಿದ 'ಕಲ್ಚರಲ್ ಹಿಸ್ಟರಿ ಆಫ್ ಇಂಡಿಯಾ' ಗ್ರಂಥದಲ್ಲಿನ ಅವರ 'ದಿ ಅರ್ಲೀ ಆರ್ಯನ್ಸ್' ಲೇಖನದಲ್ಲಿ—"ಆರ್ಯರು ಭಾರತದ ಮೇಲೆ ಆಕ್ರಮಣ ನಡೆಸಿದ ಬಗ್ಗೆ ಯಾವುದೇ ದಾಖಲೆ ಇರುವು ದಿಲ್ಲ ; ಅಲ್ಲದೇ ಪ್ರಾಚ್ಯಶೋಧನೆಯಿಂದಲೂ ಇದು ಪತ್ತೆಯಾಗಿಲ್ಲ". ಎಂದು ತಿಳಿಸಿದ್ದಾರೆ.

ಹೀಗೆ, ಆರ್ಯರು ಭಾರತದ ಮೇಲೆ ಆಕ್ರಮಣ ನಡೆಸಿದ ಬಗ್ಗೆ ಯಾವ ರೀತಿಯ ಪ್ರಮಾಣವೂ ದೊರೆಯುತ್ತಿಲ್ಲ; ಹಾಗೂ ಪ್ರಾಚ್ಯ ಶೋಧನದ ಸಹಾಯದಿಂದಲೂ ಇದನ್ನು ಸಿದ್ಧಪಡಿಸಲಾಗುವುದಿಲ್ಲ.

ಇಂತಹ ಸಂದರ್ಭಗಳಲ್ಲಿ ಸಿಂಧೂ ಕಣಿವೆಯ ಹಡಪ್ಪಾ ಸಂಸ್ಕೃತಿಯನ್ನು ಉಲ್ಲೇಖಿಸಲಾಗುತ್ತಿದೆ. ಹಡಪ್ಪಾ ಮತ್ತು ಮೋಹನ್ ಜೋ ದಡೋಗಳಲ್ಲಿ ಈ ಬಗ್ಗೆ ನಡೆಸಿದ ಭೂ-ಉತ್ಖನನದಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ಅವುಗಳು ದೇಶದ ಪ್ರಾಚೀನಮತ ಸಂಸ್ಕೃತಿಗಳೆಂಬುದಾಗಿ ದೃಢೀಕರಿಸಲಾಗಿದೆ. ಈ ಸಂಸ್ಕೃತಿಯ ಪತನದ ನಂತರವೇ ಆರ್ಯರ ಆಗಮನವಾಯಿತೆಂದು ಹೇಳ ಲಾಗುತ್ತಿದೆ. ಈ ವಿಷಯದಲ್ಲಿ ನಾವು ನಮ್ಮ ಕಡೆಯಿಂದ ಏನೂ ಹೇಳದೇ, ಮೋಹನ್ ಜೋ ದಡೋ ಭೂ-ಉತ್ಖನನದಲ್ಲಿ ದೊರಕಿದ ಒಂದು ಮುದ್ರೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಫೋಟೋ ಸ್ಟ್ಯಾಟ್' ಪ್ರತಿಕೃತಿಯನ್ನು ಈ ಕೆಳಗೆ ಕೊಡುತ್ತಿದ್ದೇವೆ. ಅದು ತನ್ನ ಕಥೆಯನ್ನು ತಾನೇ ಹೇಳುವಂತೆ ತೋರುತ್ತಿದೆ—



[1931ರಲ್ಲಿ ಕೇಂಬ್ರಿಜ್‌ನ ಸರ್ ಜಾನ್ ಮಾರ್ಷಲ್ ಅವರ ಸಂಪಾದಕತ್ವದ "ಮೋಹೆನ್-ಜೋ-ದಾರೋ ಆಂಡ್ ದಿ ಇಂಡಸ್ ಸಿವಿಲಿಜೇಷನ್" ಎಂಬ ಗ್ರಂಥದಲ್ಲಿ ನಮೂದಿಸಿರುವ ಮೋಹನ್ ಜೋ ದಡೋ ಉತ್ಖನನದಿಂದ ದೊರಕಿದ ಮುದ್ರೆಯ ಸಂಖ್ಯೆ 387, ಪ್ಲೇಟ್ ಸಂಖ್ಯೆ cxii.]

ಇದರಲ್ಲಿ, ಒಂದು ವೃಕ್ಷದ ಮೇಲೆ ಎರಡು ಪಕ್ಷಿಗಳಿದ್ದು, ಅವುಗಳ ಪೈಕಿ ಒಂದು, ಹಣ್ಣನ್ನು ತಿನ್ನುತ್ತಿದೆ ; ಮತ್ತೊಂದು ಕೇವಲ ನೋಡುತ್ತಿದೆ.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿ
ಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥
(ಋಗ್ವೇದ : 1–164–20)

ಮೇಲಿನ ಋಗ್ವೇದ–ಮಂತ್ರದಲ್ಲಿ ಸಂಸಾರರೂಪೀ ವೃಕ್ಷದ ಮೇಲೆ ಸಮಾನ ಸ್ವಭಾವದ ಎರಡು ಪಕ್ಷಿಗಳು ಕೂತಿವೆ ; ಅದರಲ್ಲೊಂದು ಸಂಸಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಖವನ್ನು ಅನುಭವಿಸುತ್ತಿದೆ; ಮತ್ತೊಂದು ತಾನು ಸಂಸಾರ ಸುಖವನ್ನನುಭವಿಸದೇ, ಬೇರೆಯ ಪಕ್ಷಿಯನ್ನು ನಿರೀಕ್ಷಿಸುತ್ತಿದೆ.

ಮೋಹನ್‌ಜೋದಡೋ ಉತ್ಖನನದಲ್ಲಿ ದೊರಕಿದ ಚಿತ್ರದಲ್ಲಿ ಏನನ್ನು ತೋರಿಸಲಾಗಿದೆಯೋ, ಆದಕ್ಕೆ ಆಧಾರ ಮೇಲಿನ ಋಗ್ವೇದ–ಮಂತ್ರವೇ ಆಗಿರುವುದು ಸ್ಪಷ್ಟವಾಗುತ್ತದೆ. ಋಗ್ವೇದಕ್ಕಿಂತಲೂ ಪ್ರಾಚೀನ ಗ್ರಂಥ ವಿಶ್ವದಲ್ಲಿ ಯಾವುದೂ ಇಲ್ಲವೆಂಬುದು ನಿರ್ವಿವಾದ. ಕಲಾಕಾರನಿಂದ ನಿರ್ಮಿತವಾದ ಮೇಲಿನ ಚಿತ್ರಕ್ಕೆ ಮೊದಲೇ ಋಗ್ವೇದ ಅಸ್ತಿತ್ವದಲ್ಲಿದ್ದಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೋಹನ್ ಜೋ ದಡೋ ಉತ್ಖನನದಿಂದ ದೊರಕಿದ ಈ ಚಿತ್ರದಿಂದಾಗಿ ವೇದಗಳು, ಕಡೆಯ ಪಕ್ಷ ಋಗ್ವೇದವು, ಹಡಪ್ಪಾ ಸಂಸ್ಕೃತಿಗಿಂತಲೂ ಮೊದಲೇ ಇದ್ದುದು ಸ್ಪಷ್ಟವಾಗಿರುತ್ತದೆ. ವೇದಗಳು ಆರ್ಯರ ಗ್ರಂಥಗಳಾಗಿದ್ದು, ಆರ್ಯರು ಎಲ್ಲರಿಗಿಂತಲೂ ಮೊದಲಿಗರೆಂಬುದು ಇದರಿಂದ ಪ್ರಮಾಣಗೊಳ್ಳುತ್ತದೆ. ಪ್ರಾಚ್ಯ ಶೋಧನಾ ವಿಭಾಗದ ನನ್ನ ಸಹಾಧ್ಯಾಯೀ ಮಿತ್ರರೊಬ್ಬರು—'ಹಡಪ್ಪಾ ಮತ್ತು ಆರ್ಯ ಸಂಸ್ಕೃತಿಗಳು ಸಮಕಾಲೀನವಿರಬಹುದೆಂದು ವ್ಯಕ್ತಪಡಿಸಿದ್ದಾರೆ. 'ದುರ್ಜನ-ತೋಷನ್ಯಾಯ'*–ದಿಂದ ಅವರ ವಾದವನ್ನು ಒಂದು ಪಕ್ಷ ಒಪ್ಪಿದಾಗ್ಯೂ ಆರ್ಯರಿಗಿಂತ ಮೊದಲು ಇಲ್ಲಿ ಯಾರಾದರೂ ಇದ್ದರೆಂಬ ಕಲ್ಪನೆಯೂ ಕೂಡ ಸುಳ್ಳಾಗುತ್ತದೆ.

ಈ ಪ್ರಸಂಗಕ್ಕೆ ಸಂಬಂಧಿಸಿದಂತೆ ನವದೆಹಲಿಯ ದಿ. 3–8–1985ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕೆಳಕಂಡ ವಿವರಣೆ ಅತ್ಯಂತ ಮಹತ್ವಪೂರ್ಣವಾದಾಗಿದೆ:—

"ಉಜ್ಜಯಿನಿಯ ವಿಕ್ರಮ ವಿಶ್ವವಿದ್ಯಾಲಯದ ಪ್ರಾಚ್ಯ ಶೋಧನಾ ವಿಭಾಗದ ಭೂತಪೂರ್ವ ಮುಖ್ಯಸ್ಥರಾಗಿದ್ದ ಶ್ರೀ ವಿಷ್ಣು ಶ್ರೀಧರ ವಾಕಣಕರ್ ಅವರು ಹಡಪ್ಪಾ ಮತ್ತು ಮೋಹನ್ ಜೋ ದಡೋಗಳಲ್ಲಿ ಸಿಂಧೂ ಕಣಿವೆಯ ಸಂಸ್ಕೃತಿಯ ಬಗ್ಗೆ ದೊರಕಿದ ಮುದ್ರೆಗಳಲ್ಲಿನ ಬರಹಗಳಿಗೆ ಸಂಬಂಧಿಸಿದ

*ಎಂದರೆ, ಮತ್ತೊಬ್ಬರನ್ನು ಸಂತೋಷಗೊಳಿಸುವ ಸಲುವಾಗಿ, ಅವರ ವಾದ ಸರಿಯಲ್ಲದಿದ್ದರೂ, ಅದನ್ನು ಒಪ್ಪಿಕೊಳ್ಳುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಹಸ್ಯವನ್ನು ಕಳಿದ ಗುರುವಾರದಂದು ಸಫಲತಾಪೂರ್ವಕವಾಗಿ ಭೇದಿಸಿರುವುದಾಗಿ ಹೇಳಿಕೊಂಡಿದ್ದಾರೆ. ಸಿಂಧೂ ಕಣಿವೆ ಲಿಪಿ ಭಾರತಕ್ಕೆ ಪ್ರಪ್ರಥಮವಾಗಿದ್ದು, ಅದು ಆರ್ಯ ಸಂಸ್ಕೃತಿಯನ್ನು ಹೋಲುವುದಾಗಿದೆ, ಎಂದೂ, ಅವರು ಹೇಳಿಕೊಂಡಿದ್ದಾರೆ.

"ಸಿಂಧೂ ಕಣಿವೆ ಸಂಸ್ಕೃತಿಗೆ ಸಂಬಂಧಿಸಿದ ಇತ್ತೀಚಿನ ಫಲಿತಾಂಶಗಳು ಕಂಪ್ಯೂಟರ್ ಆಧಾರಿತವಾಗಿದ್ದು, ಸಿಂಧೂ ಕಣಿವೆ ಸಂಸ್ಕೃತಿ ಆರ್ಯೇತರ ಸಂಸ್ಕೃತಿಯೆಂದು ಹೇಳಿಕೊಂಡಿರುವ ವಿದೇಶೀಯರ ಹೇಳಿಕೆಯನ್ನು ಅವರು ಪ್ರತಿಭಟಿಸಿದ್ದಾರೆ".

ಡಾ॥ ವಾಕಣಕರ್ ಅವರು ಎರಡನೆಯ ಬಾರಿಗೆ, ಅಹಮದಾಬಾದಿನ ದಿ. 22-12-1985ರ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಕೆಳಕಂಡಂತೆ ತಿಳಿಸಿದ್ದಾರೆ—

"ಪ್ರಾಚ್ಯಶೋಧನಾ, ಖನಿಜವಿಜ್ಞಾನ, ಇತಿಹಾಸ, ಜಾನಪದ ಇತ್ಯಾದಿ ವಿವಿಧ ವಿಭಾಗಗಳಿಗೆ ಸೇರಿದ 30 ಮಂದಿ ತಜ್ಞರೊಡನೆ ಕೈಕೊಂಡಿರುವ ಶೋಧನಾ ಕಾರ್ಯ ಪೂರ್ಣಗೊಂಡಾಗ, ಮುಧ್ಯ ಏಷ್ಯಾ ಇತ್ಯಾದಿಗಳಿಂದ ಆರ್ಯರು ಭಾರತದ ಮೇಲೆ ಆಕ್ರಮಣ ನಡೆಸಿದರೆಂಬ ಐತಿಹಾಸಿಕ ತಜ್ಞರ ಜನಾದರಣೀಯ ವಿಚಾರವೂ ಸಂಪೂರ್ಣವಾಗಿ ಮಾರ್ಪಾಡಾಗಬಹುದು".

ಹೀಗೆ, ಶ್ರೀಧರ ವಾಕಣಕರ್ ಅವರು 30 ವಿಶೇಷಜ್ಞರ ಸಹಾಯದಿಂದ 20 ವರ್ಷಗಳ ಕಾಲ ಅಧ್ಯಯನ ನಡೆಸಿ, ಹಡಪ್ಪಾ ಸಂಸ್ಕೃತಿಗೆ ಆರ್ಯ ಸಂಸ್ಕೃತಿಯೇ ಮೂಲವೆಂಬುದನ್ನು ಸಿದ್ಧ ಮಾಡಿ ತೋರಿಸಿದ್ದಾರೆ. ಅಲ್ಲದೇ, ಆರ್ಯಸಂಸ್ಕೃತಿ ಹಡಪ್ಪಾ ಸಂಸ್ಕೃತಿಗಿಂತ ಪ್ರಾಚೀನವಾದದ್ದೆಂದೂ ಸಿದ್ಧ ಮಾಡಿದ್ದಾರೆ. ಹಡಪ್ಪಾ ಸಂಸ್ಕೃತಿ ಆರ್ಯ ಸಂಸ್ಕೃತಿಯ ಅಂಗವೆಂಬುದನ್ನೂ ಅವರು ಕಂಪ್ಯೂಟರ್ ಸಹಾಯದಿಂದ ನಿಷ್ಕರ್ಷಿಸಿದ್ದಾರೆ. ಅವರ ಶೋಧನಾ ಕಾರ್ಯ ಪೂರ್ಣವಾದ ನಂತರ, ಆರ್ಯರು ವಿದೇಶಿಗಳಾಗಿ ಭಾರತದ ಮೇಲೆ ಆಕ್ರಮಣ ಮಾಡಿದರೆಂಬ ವಾದವನ್ನು ಮಿಥ್ಯಾವಾದವೆಂದು ಸಿದ್ಧಮಾಡಬಹುದೆಂದೂ ಅವರು ತಿಳಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡಾ॥ ಫತೇಸಿಂಹರು ಪ್ರಪ್ರಥಮವಾಗಿ 1960ರಲ್ಲಿ ಸಿಂಧೂಲಿಪಿಯನ್ನು ಓದುವುದರಲ್ಲಿ ಸಫಲರಾದರು. ಅದುವರೆಗೆ ಅವರು ಸುಮಾರು ಎರಡೂವರೆ ಸಾವಿರ ಮುದ್ರೆಗಳಲ್ಲಿನ ಲಿಪಿಗಳನ್ನು ಓದಿದ್ದರು. ಇದರ ಆಧಾರದ ಮೇಲೆ, ಜೋಧ್‌ಪುರದಿಂದ ಪ್ರಕಟವಾಗುತ್ತಿದ್ದ 'ರಾಜಸ್ಥಾನ ಪ್ರಾಚ್ಯ ವಿದ್ಯಾ ಪ್ರತಿಷ್ಠಾನ'ದ ಪ್ರಕಾಶನವಾದ 'ಸ್ವಾಹಾ' ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಅವರು ಬರೆದಿದ್ದರು. ಡಾ॥ ಫತೇಸಿಂಹ ಅವರ ಶೋಧನೆಯ ಆಧಾರದ ಮೇಲೆ ಡಾ॥ ಪದ್ಮಧರ ಪಾಠಕ್ ಅವರು "ಹಿಂದುಸ್ತಾನ್ ಟೈಮ್ಸ್" ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದು, ಅದರಲ್ಲಿ ಡಾ॥ ಫತೇಸಿಂಹ ಅವರ ಸಂಶೋಧನೆಯನ್ನು ಪುಷ್ಟೀಕರಿಸಿದ್ದರು. ತದನಂತರ, ಕೇಂಬ್ರಿಜ್‌ನ ಡಾ॥ ಆಲ್ಪಿನ್ ಅವರು ಅದೇ ಪತ್ರಿಕೆಯ ಸಂಪಾದಕರ ಹೆಸರಿನಲ್ಲಿ ಒಂದು ಪತ್ರವನ್ನು ಬರೆದು, ಡಾ॥ ಸಿಂಹ ಅವರ ಅನ್ವೇಷಣೆಯಿಂದ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳಲ್ಲಿನ ಭೇದವೇ ಉಳಿಯುವುದಿಲ್ಲವೆಂಬುದಾಗಿ ಎಚ್ಚರ ನೀಡಿದರು.

ಭಾರತೀಯ ವಿದ್ವಾಂಸರಲ್ಲನೇಕರು ಆರ್ಯರು ಭಾರತದ ಮೂಲ ನಿವಾಸಿಗಳೆಂಬ ಸಿದ್ಧಾಂತವನ್ನು ಪುಷ್ಟೀಕರಿಸಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಪುಷ್ಟೀಕರಿಸುವ ಸಂಬಂಧದಲ್ಲಿ ಅವರು ನೀಡಿದ ಕೆಲವು ಕಾರಣಗಳು ಕೆಳಕಂಡಂತಿವೆ :—

1. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಪಲಸೆ ಹೋಗತಕ್ಕ ಜನರಿಗೆ ಅವರ ಮೂಲನಿವಾಸ ಅಥವಾ ಸಂಸ್ಕೃತಿ ನೂರಾರು ವರ್ಷಗಳವರೆಗೆ ಅವರ ಸ್ಮೃತಿಯಲ್ಲಿರುತ್ತದೆ. ಭಾರತದಲ್ಲಿ ಬಂದು ನೆಲೆಸಿದ ಪಾರಸಿಗಳು ಇಲ್ಲಿಗೆ ಬಂದು 800 ವರ್ಷಗಳಾಗಿದ್ದಾಗ್ಯೂ ಅವರ ಮೂಲನಿವಾಸವನ್ನು ಸ್ಮೃತಿಯಲ್ಲಿಟ್ಟುಕೊಂಡಿದ್ದಾರೆ. ಪ್ರಾಚೀನ ಮಿಶ್ರದೇಶವಾಸಿ ಅಥವಾ ಈಜಿಪ್ತರಿಗೆ, ಮತ್ತು ಫಿನೀಷಿಯನ್ನರಿಗೆ ಅವರವರ ಮೂಲನಿವಾಸ ಸ್ಮೃತಿಯಲ್ಲಿದೆ. ಆದರೆ, ವೈದಿಕ ಆರ್ಯರಿಗೆ ಅವರ ಮೂಲನಿವಾಸದ ಬಗ್ಗೆ ಯಾವುದೇ ವಿಚಾರವಿಲ್ಲದಿದ್ದು, ಎಂದಿನಿಂದಲೂ ಈ ದೇಶವೇ ತಮ್ಮ ಮೂಲ ನಿವಾಸವೆಂದು ತಿಳಿದುಕೊಂಡಿರುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

2. ವೈದಿಕ ಸಾಹಿತ್ಯ ಅತ್ಯಂತ ಪ್ರಾಚೀನತಮ ಸಾಹಿತ್ಯ. ಒಂದು ವೇಳೆ ಆರ್ಯಜನರು ಹೊರಗಿನಿಂದ ಬಂದು ಇಲ್ಲಿ ನೆಲೆಸಿದರೆಂದು ಭಾವಿಸಿದಲ್ಲಿ, ಆ ದೇಶಗಳಲ್ಲಿ ಅವರ ಸಾಹಿತ್ಯ ದೊರಕಬೇಕಾಗಿತ್ತಲ್ಲವೇ ? ಕಡೆಯ ಪಕ್ಷ ಅಲ್ಪ ಸ್ವಲ್ಪವಾದರೂ ದೊರಕಬೇಕಾಗಿತ್ತು! ಆರ್ಯರು ಭಾರತಕ್ಕೆ ಬಂದನಂತರವೇ ಅವರ ಮಸ್ತಿಷ್ಕ ವಿಕಾಸವಾಯಿತೆಂದು ಹೇಳುವುದು ತರ್ಕ ಬದ್ಧವಲ್ಲ. ಇದಕ್ಕೆ ಬದಲಾಗಿ, ಆರ್ಯರಲ್ಲಿ ಕೆಲವರು ಇಲ್ಲಿಂದಲೇ ಹೊರ ದೇಶಗಳಿಗೆ ಹೋಗಿ ನೆಲೆಸಿದರೆಂದು ಹೇಳುವುದು ಬಹಳ ಸೂಕ್ತವಾಗಿದೆ. ಹಾಗೆ ಹೋದವರು ಸಾಧಾರಣ ಬುದ್ಧಿಶಕ್ತಿಯುಳ್ಳವರಾಗಿದ್ದು, ಅಲ್ಲಿನ ನಿವಾಸಿಗಳಿಗೆ ತಮ್ಮ ಉತ್ತಮ ಸಾಹಿತ್ಯವನ್ನೊದಗಿಸಲಾಗಲಿಲ್ಲ, ಹಾಗೂ ಉತ್ತಮ ಸಂಸ್ಕೃತಿಯನ್ನು ನೀಡಲಾಗಲಿಲ್ಲ.

3. ಋಗ್ವೇದದಲ್ಲಿ ಕಂಡುಬರುವ ಮೇರೆಗೆ, ಆರ್ಯರು ಮೂಲತಃ ಪಂಜಾಬಿನ ನೆರೆಹೊರೆಯಲ್ಲಿ ನೆಲೆಸಿದ್ದರೆಂದು ತಿಳಿದು ಬರುತ್ತದೆ.

4. ಯೂರೋಪಿನ ಯಾವುದೇ ಭಾಷೆಯಲ್ಲಾಗಲೀ ಆರ್ಯ ಶಬ್ದದ ವಿಕೃತರೂಪವು ಯಾವುದೇ ರೀತಿಯಲ್ಲಿ ಕಂಡುಬರುವುದಿಲ್ಲ. ಅಲ್ಲಿನ ಯಾವ ಭಾಗದಲ್ಲಾದರೂ ಆರ್ಯರ ಮೂಲಸ್ಥಾನ ಇದ್ದಿದ್ದಲ್ಲಿ, ಅವರ ಭಾಷೆಯಲ್ಲಿ ಆರ್ಯ ಶಬ್ದವನ್ನು ಹೋಲುವ ಯಾವುದಾದರೂ ಶಬ್ದ ಇರಬೇಕಿತ್ತು.

5. ಭಾರತದಲ್ಲಿ ಪ್ರಚಲಿತ 'ಅನಾಡೀ' ಎಂಬ ಶಬ್ದಕ್ಕೆ ಐತಿಹಾಸಿಕ ಹಿನ್ನೆಲೆ ಇದ್ದು, ಇದು 'ಅನಾರ್ಯ' ಶಬ್ದದ ಅಪಭ್ರಂಶವಾಗಿರುತ್ತದೆ. ಆರ್ಯ ಶಬ್ದವನ್ನು ಹೇಗೆ ಸುಶಿಕ್ಷಿತ, ಹಾಗೂ ಸಭ್ಯಜನರ ಬಗ್ಗೆ ಬಳಸಲಾಗುತ್ತದೋ, ಹಾಗೆಯೇ ಅನಾರ್ಯ ಶಬ್ದದ ಅಪಭ್ರಂಶವಾಗಿರುವ ಅನಾಡೀ ಶಬ್ದವನ್ನು ಮೂರ್ಖ, ಹಾಗೂ ಅಲ್ಪಜ್ಞ ಅಥವಾ ಅಸಭ್ಯರ ಬಗ್ಗೆ ಬಳಸಲಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

6. 'ಸಂಸ್ಕೃತವು ಎಲ್ಲ ಭಾರತೀಯ ಭಾಷೆಗಳ ಮೂಲ ಭಾಷೆಯಾಗಿದೆ. ಆರ್ಯರು ಬರುವುದಕ್ಕೆ ಮುಂಚಿಯೇ, ದಕ್ಷಿಣ ಭಾರತದ ಮೂಲನಿವಾಸಿಗಳೆಂದು ಹೇಳಲಾಗುವ ಜನರ ಭಾಷೆಗಳಲ್ಲಿಯೂ ಶೇಕಡ 75 ರಿಂದ 90 ರಷ್ಟು ಸಂಸ್ಕೃತ ಶಬ್ದಗಳಿವೆ. ಸಂಸ್ಕೃತ ಭಾಷೆ ಹೊರಗಿನಿಂದ ವಲಸೆ ಬಂದು ಇಲ್ಲಿ ನೆಲೆಸಿರುವ ಆರ್ಯರ ಭಾಷೆಯಾಗಿದ್ದಲ್ಲಿ, ಅವರು ಬರುವುದಕ್ಕೆ ಬಹಳ ಮೊದಲೇ ಇಲ್ಲಿ ವಾಸಿಸುತ್ತಿದ್ದ ಮೂಲನಿವಾಸಿಗಳ ಭಾಷೆಗಳಲ್ಲಿ ಶೇಕಡ 75 ರಿಂದ 90 ರಷ್ಟು ಸಂಸ್ಕೃತ ಪದಗಳು ಎಲ್ಲಿಂದ ಬಂದವೆಂಬ ಪ್ರಶ್ನೆ ಉದ್ಭವಿಸುತ್ತದೆ.

———

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಆರ್ಯ' ಮತ್ತು 'ದಸ್ಯು' ಶಬ್ದಗಳ ಸತ್ಯಾರ್ಥ

ವಿದೇಶೀ ವಿದ್ವಾಂಸರು ಮತ್ತು ಅವರ ಭಾರತೀಯ ಅನುಯಾಯೀ ಲೇಖಕರಮೇರೆಗೆ—ಋಗ್ವೇದದಲ್ಲಿ ಬರುವ ಆರ್ಯ; ಮತ್ತು ದಾಸ, ಅಥವಾ ದಸ್ಯು ಶಬ್ದಗಳು ವಿವಿಧ ಪಂಗಡಗಳು, ಹಾಗೂ ವರ್ಣಗಳಿಗೆ ಅನ್ವಯಿಸುತ್ತವೆ. ಆರ್ಯರು ಭಾರತದ ಮೂಲನಿವಾಸಿಗಳಲ್ಲ, ಎಂಬುದು ಅವರ ವಾದ:—

"ವೇದದಲ್ಲಿ ದಾಸ ಅಥವಾ ದಸ್ಯು ಎಂಬುದಾಗಿ ಪ್ರತಿಪಾದಿಸಿರುವ* ಕೋಲ, ದ್ರಾವಿಡ, ಸಂಥಾಲ, ಭೀಲ ಇತ್ಯಾದಿ ಆದಿವಾಸಿಗಳೇ ಭಾರತದ ಮೂಲ ನಿವಾಸಿಗಳು. ಆರ್ಯರ ಧರ್ಮ, ಸಭ್ಯತೆ, ಬಣ್ಣ—ರೂಪ, ಆಕೃತಿ, ಭಾಷೆ ಇತ್ಯಾದಿಗಳಲ್ಲಿ ಭಿನ್ನತೆ ಇದ್ದಿತು. ಆದಿವಾಸಿ ಜನರು ಕಪ್ಪುವರ್ಣದವರಾಗಿದ್ದು, ಅವರ ಮೂಗು ಚಪ್ಪಟೆಯಾಗಿದ್ದಿತು. ಮತ್ತು ಅವರು ಲಿಂಗ-ಪೂಜಕರಾಗಿದ್ದರು. ಅವರು ಆರ್ಯರೊಡನೆ ಸದಾ ಯುದ್ಧ ಮಾಡುತ್ತಿದ್ದರು. ಆರ್ಯರು ತೀಕ್ಷ್ಣ ಬುದ್ಧಿಯವರಾಗಿದ್ದು, ಅವರ ಶಸ್ತ್ರಾಸ್ತ್ರಗಳೂ ಉತ್ತಮರೀತಿಯದಾಗಿದ್ದುವು. ಇದರಿಂದಾಗಿ, ಅವರು ಪ್ರಾಯಃ ಆದಿವಾಸಿಗಳ ಮೇಲೆ ಜಯಗಳಿಸುತ್ತಿದ್ದರು. ಈ ಮೂಲನಿವಾಸಿಗಳನ್ನು 'ದಾಸ' ಅಥವಾ 'ದಸ್ಯು'ಗಳೆಂಬುದಾಗಿ ವೇದದಲ್ಲಿ ನಿಕೃಷ್ಟರೂಪದಲ್ಲಿ ವರ್ಣಿಸಲಾಗಿದೆ."

ವೈದಿಕ ಧರ್ಮವನ್ನು ಭ್ರಷ್ಟಗೊಳಿಸಿ, ಆಂಗ್ಲರ ಪ್ರಭುತ್ವವನ್ನು ಭಾರತದಲ್ಲಿ ಬಲಗೊಳಿಸುವ ಮತ್ತು ಭಾರತೀಯರನ್ನು ಮತಾಂತರಗೊಳಿಸಿ

---

* "ಅತಿಕ್ರಮಣಕಾರರಾದ ಅಥವಾ ವಲಸೆ ಬಂದ ಆರ್ಯರು ಭಾರತದಲ್ಲಿ ಎರಡು ಗುಂಪಿನ ಜನರನ್ನು ನೋಡಿದರು. ಆ ಪೈಕಿ ಒಂದು ಗುಂಪಿನ ಜನರನ್ನು ದಾಸ ಅಥವಾ ದಸ್ಯುಗಳೆಂದೂ ಮತ್ತೊಂದು ಗುಂಪಿನ ಜನರನ್ನು ನಿಷಾದರೆಂದೂ ಹೆಸರಿಸಿದರು."

(ಆರ್. ಸಿ. ಮುಜುಂದಾರ್ ಅವರ "ವೇದಿಕ್ ಏಜ್"—ಪುಟ 156)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ರೈಸ್ತರನ್ನಾಗಿ ಮಾಡುವ ಉದ್ದೇಶ್ಯದಿಂದಲೇ ಇಂತಹ ತಪ್ಪು ಅಭಿಪ್ರಾಯಗಳನ್ನು ಹರಡಿದರು. ಇದರ ಪರಿಣಾಮವಾಗಿ, ಭಾರತ ಅನೇಕ ವಿಪತ್ತುಗಳನ್ನು ಎದುರಿಸಬೇಕಾಯಿತು. ವೇದಗಳಲ್ಲಿ ಬಂದಿರುವ ಆರ್ಯ ಮತ್ತು ದಸ್ಯು ಇತ್ಯಾದಿ ಶಬ್ದಗಳು ನಿಜಕ್ಕೂ ಜಾತಿ ಅಥವಾ ಪಂಗಡಗಳನ್ನು ಸೂಚಿಸುವ ಶಬ್ದಗಳಾಗಿರದೇ, ಗುಣವನ್ನು ಸೂಚಿಸುವ ಶಬ್ದಗಳಾಗಿವೆ. ಉದ್ದೇಶ್ಯಪೂರ್ವಕವಾಗಿಯೋ, ಅಥವಾ ವೇದಗಳಲ್ಲಿನ ಈ ಶಬ್ದಗಳ ನಿಜಾರ್ಥವನ್ನು ತಿಳಿಯಲು ಅಸಮರ್ಥರಾಗಿಯೋ, ಈ ದೇಶವನ್ನು ವಿಚ್ಛಿದ್ರ ಕಾರಕ ಮಾರ್ಗಕ್ಕೆ ದೂಡಲಾಗಿದೆ.

ಸುಪ್ರಸಿದ್ಧ ದಾಕ್ಷಿಣಾತ್ಯ ವಿದ್ವಾಂಸರಾದ ಪ್ರಿನ್ಸಿಪಾಲ್ ಶ್ರೀ ಪಿ.ಟಿ. ಶ್ರೀನಿವಾಸ ಅಯ್ಯಂಗಾರ್ ಅವರು ತಮ್ಮ 'ದ್ರಾವಿಡಿಯನ್ ಸ್ಟಡೀಸ್' ಎಂಬ ಗ್ರಂಥದಲ್ಲಿ,—"ಆರ್ಯ ಮತ್ತು ದಸ್ಯು ಶಬ್ದಗಳು ವಿವಿಧ ಜನಾಂಗವನ್ನು, ಸೂಚಿಸದೇ ಸಂಸ್ಕೃತಿ ಅಥವಾ ಪಂಥವನ್ನು ಸೂಚಿಸುವ ಶಬ್ದಗಳಾಗಿವೆ. ಸುಸಂಸ್ಕಾರ ಪಡೆಯದವರು, ಭಯ-ಭಕ್ತಿ ಇಲ್ಲದವರು, ಯಜ್ಞ-ಯಾಗಾದಿಗಳನ್ನು ಮಾಡದವರು, ಪ್ರಾರ್ಥನೆ ಮಾಡದವರು, ಸಾಹಸಿಗಳಲ್ಲದವರು ಮೊದಲಾದವರು ದಸ್ಯುಗಳು. ಆದುದರಿಂದ, ಆರ್ಯ ಮತ್ತು ದಸ್ಯುಗಳಲ್ಲಿನ ಭೇದ ಜನಾಂಗ-ಭೇದವಾಗದಿದ್ದು, ಸಂಸ್ಕೃತಿಯಲ್ಲಿನ ಭೇದವಾಗಿದ್ದಿತು," ಎಂದು ತಿಳಿಸಿದ್ದಾರೆ.

ಈ ರೀತಿ, ಶ್ರೀ ಅಯ್ಯಂಗಾರ್ ಅವರು ಆರ್ಯ ಮತ್ತು ದಸ್ಯುಗಳ ನಡುವಣ ಭೇದಕ್ಕೆ ಅವರ ಗುಣ-ಕರ್ಮ-ಸ್ವಭಾವಗಳೇ ಆಧಾರವೆಂದೂ, ಜಾತಿ ಮತ್ತು ಪಂಗಡಗಳು ಆಧಾರವಲ್ಲವೆಂದೂ, ಅಭಿಪ್ರಾಯ ಪಟ್ಟಿದ್ದಾರೆ. ಅವರ ಅಭಿಪ್ರಾಯಕ್ಕೆ ಕೆಳಗಿನ ಋಗ್ವೇದ ಮಂತ್ರವೇ ಆಧಾರ:—

ಅನ್ಯವ್ರತಮಮಾನುಷಮಯಜ್ವಾನಮದೇವಯುಮ್।
ಅವ ಸ್ವಃ ಸಖಾ ದುಧುವೀತ ಪರ್ವತಃ ಸುಘ್ನಾಯ ದಸ್ಯುಂ ಪರ್ವತಃ॥

[ಋಗ್ವೇದ 8-70-11]

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಮಂತ್ರಗಳಲ್ಲಿನ **ಅನ್ಯವ್ರತ, ಅಮಾನುಷ, ಅದೇವಯುಮ್**–ಶಬ್ದಗಳು ದಸ್ಯುಗಳ ಗುಣವನ್ನು ಸೂಚಿಸುತ್ತಿದ್ದು: ಅಸತ್ಯ, ಹಿಂಸೆ, ದುಷ್ಕೃತ್ಯಾದಿ ಕರ್ಮಗಳನ್ನು, ಮತ್ತು ಅಮಾನುಷ, ಅವ್ಯವಹಾರಾದಿ ಕರ್ಮಗಳನ್ನು ಆಚರಿಸುವವರನ್ನೂ, ಹಾಗೂ ದಿವ್ಯಗುಣಯುಕ್ತರಾದ ವಿದ್ವಾಂಸರ ಅಪೇಕ್ಷೆ ಇಲ್ಲದಿರುವವರನ್ನೂ ದಸ್ಯುಗಳೆಂದು ಕರೆಯಲಾಗಿದೆ. ಯಾವುದೇ ಜಾತಿ ಅಥವಾ ಪಂಗಡಗಳ ಬಗ್ಗೆ ದ್ವೇಷ ಅಥವಾ ವಿರೋಧ ಭಾವನೆಯನ್ನು ಈ ಮಂತ್ರದಲ್ಲಿ ವ್ಯಕ್ತಪಡಿಸಿರುವುದಿಲ್ಲ.

ಮದರಾಸು ವಿಶ್ವವಿದ್ಯಾಲಯದ ಶ್ರೀ ವಿ. ಆರ್. ರಾಮಚಂದ್ರ ದೀಕ್ಷಿತರ್ ಅವರು 1940 ನೇ ನವಂಬರ್ 29 ಮತ್ತು 30 ರಂದು ಮದರಾಸು ವಿಶ್ವವಿದ್ಯಾಲಯದಲ್ಲಿ ಎರಡು ಮಹತ್ವಪೂರ್ಣ ವ್ಯಾಖ್ಯಾನಗಳನ್ನು ನೀಡಿದ್ದರು. ಅವುಗಳನ್ನು 1947ರಲ್ಲಿ **ಅಡಯಾರ್**ನ ಗ್ರಂಥಾಲಯದ ಮೂಲಕ **"ಆರಿಜಿನ್ ಅಂಡ್ ಸ್ಪ್ರೆಡ್ ಆಫ್ ತಮಿಲ್ಸ್"** ಎಂಬ ಗ್ರಂಥದಲ್ಲಿ ಪ್ರಕಟಿಸಲಾಗಿದೆ. ಆದರಲ್ಲಿ ಶ್ರೀ ದೀಕ್ಷಿತರ್ ಅವರು—"ದಸ್ಯುಗಳು ಆರ್ಯೇತರರಲ್ಲವೆಂಬುದು ವಾಸ್ತವಾಂಶ. ದಸ್ಯುಗಳು–ದ್ರಾವಿಡರು ಪಂಜಾಬ್ ಮತ್ತು ಗಂಗಾ ನದೀ ಕಂದರಗಳಲ್ಲಿ ವಾಸಿಸುತ್ತಿದ್ದು, ಭಾರತವನ್ನು ಆಕ್ರಮಿಸಿದರೆಂದು ಹೇಳಲಾಗುವ, ಹಾಗೂ ಆರ್ಯರಿಂದ ಸೋಲನ್ನನುಭವಿಸಿ ಭಾರತದ ದಕ್ಷಿಣಭಾಗಕ್ಕೆ ಓಡಿ ಹೋಗಿ, ಅದನ್ನೇ ತಮ್ಮದಾಗಿಸಿಕೊಂಡರೆಂಬ ವಾದಕ್ಕೆ ಮಾನ್ಯತೆ ದೊರೆಯಲಾರದು", ಎಂದು ತಿಳಿಸಿದ್ದಾರೆ.

ಹೀಗೆ, ದಸ್ಯುಗಳು ಆರ್ಯೇತರರಾಗಿರಲಿಲ್ಲ. ದಸ್ಯುಗಳು ಮತ್ತು ದ್ರಾವಿಡರು ಪಂಜಾಬ್, ಹಾಗೂ ಗಂಗಾ ನದೀ ಕಂದರಗಳಲ್ಲಿ ವಾಸಿಸುತ್ತಿದ್ದು, ಆರ್ಯರ ಆಕ್ರಮಣದ ನಂತರ, ಅವರಿಂದ ಪರಾಜಿತರಾಗಿ ದಕ್ಷಿಣದ ಕಡೆಗೆ ಪಲಾಯನಗೊಂಡು, ದಕ್ಷಿಣ ಭಾರತವನ್ನೇ ತಮ್ಮ ನಿವಾಸವನ್ನಾಗಿ ಮಾಡಿಕೊಂಡರೆಂಬ ಕಲ್ಪನೆ ನಿಜವಲ್ಲ.

ಮ್ಯೂರ್ ಅವರೂ ಕೂಡ ಇದೇ ಅಭಿಪ್ರಾಯವನ್ನೇ ಪ್ರತಿಪಾದಿಸಿ, ತಮ್ಮ **"ಒರಿಜಿನಲ್ ಸ್ಯಾನ್ಸ್‌ಕ್ರಿಟ್ ಟೆಕ್ಟ್ಸ್"** ಗ್ರಂಥದ ಎರಡನೇ ಸಂಪುಟದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

387 ನೇ ಪುಟದಲ್ಲಿ—"ಋಗ್ವೇದದಲ್ಲಿ ಬಂದಿರುವ ದಸ್ಯು, ಹಾಗೂ ಅಸುರರ ಬಗ್ಗೆ ಅಭ್ಯಾಸ ನಡೆಸಿದ್ದೇನೆ. ಅವರ ಪೈಕಿ ಯಾರನ್ನಾದರೂ ಆರ್ಯೇತರರೆಂಬುದಾಗಿ, ಅಥವಾ ಅವರು ಅಲ್ಲಿನ ಮೂಲ ನಿವಾಸಿಗಳೆಂಬುದಾಗಿ ಪರಿಗಣಿಸಲಾಗಿದೆಯೇ, ಎಂಬುದನ್ನು ಕಂಡು ಹಿಡಿಯಲು ಪ್ರಯತ್ನಿಸಿದ್ದೇನೆ. ಆದರೆ, ಆದರಲ್ಲಿ ಅಂತಹ ಲಕ್ಷಣಗಳಿರುವುದು ನನ್ನ ಗಮನಕ್ಕೆ ಬರಲಿಲ್ಲ," ಎಂದು ತಿಳಿಸಿದ್ದಾರೆ.

ಈ ರೀತಿಯಾಗಿ, ಋಗ್ವೇದದಲ್ಲಿ ಬಂದಿರುವ **ದಸ್ಯು** ಅಥವಾ **ಅಸುರ** ಶಬ್ದಗಳಿಗೆ ಅನಾರ್ಯ ಅಥವಾ ಮೂಲ ನಿವಾಸಿಗಳೆಂದು ಪರಿಗಣಿಸುವಂತಹ ಯಾವ ಲಕ್ಷಣಗಳೂ ಆದರಲ್ಲಿ ಕಂಡು ಬರಲಿಲ್ಲ, ಎಂಬುದು **ಮ್ಯೂರ್** ಅವರ ಅಭಿಪ್ರಾಯ.

ಇಂದ್ರಂ ವರ್ಧಂತೋ ಅಪ್ತುರಃ ಕೃಣ್ವಂತೋ ವಿಶ್ವಮಾರ್ಯಮ್।
ಅಪಘ್ನಂತೋ ಅರಾವ್ಣಃ॥

[ಋಗ್ವೇದ : 9-63-5]

'ನೀವೆಲ್ಲರೂ ಆತ್ಮ ಬಲವನ್ನು ಬೆಳೆಸಿಕೊಂಡು, ದುರ್ಗುಣಗಳನ್ನು ತೊಡೆದು ಹಾಕಿ, ಅದಾನಶೀಲತೆಯನ್ನು (ಜಿಪುಣತನ) ದೂರ ಮಾಡಿ, ಇಡೀ ವಿಶ್ವವನ್ನು ಆರ್ಯರನ್ನಾಗಿ ಮಾಡಿ', ಎಂಬುದಾಗಿ ಮೇಲ್ಕಂಡ ಋಗ್ವೇದಮಂತ್ರದಲ್ಲಿ ಪರಮಾತ್ಮನ ಆದೇಶವಿದೆ.

ಈ ಮಂತ್ರದಲ್ಲಿ ಎಲ್ಲರನ್ನೂ ಆರ್ಯರನ್ನಾಗಿ ಮಾಡಬೇಕೆಂಬ ಪ್ರೇರಣೆ ಇದೆ. ಆರ್ಯರು ಮತ್ತು ದಸ್ಯುಗಳು ಪರಂಪರಾಗತವಾಗಿ ಜಾತಿರೂಪದಲ್ಲಿ ಜನ್ಮವೆತ್ತಿದ್ದ ಪಕ್ಷದಲ್ಲಿ, ದಸ್ಯುಗಳನ್ನು ಸುಧಾರಿಸಿ ಆರ್ಯರನ್ನಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಬಗ್ಗೆ ವಿವೇಚನೆ ಮಾಡಿದಲ್ಲಿ, ಆರ್ಯರಾಗಲು ಕೆಲವು ವಿಶಿಷ್ಟ ಗುಣಗಳ ವಿಕಾಸ ಅತ್ಯಾವಶ್ಯಕ, ಎಂಬುದು ಕಂಡು ಬರುತ್ತದೆ. ಯಾರಲ್ಲಿ ಮೂರ್ಖತ್ವ, ಕೃಪಣತೆ, ಆಲಸ್ಯ ಮೊದಲಾದ ಗುಣಗಳಿರುತ್ತವೋ, ಅವರು ದಸ್ಯುಗಳೆಂದು ಇದರಿಂದ ಸ್ಪಷ್ಟವಾಗುತ್ತದೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆದ್ದರಿಂದ, ಆರ್ಯ–ದಸ್ಯು ಶಬ್ದಗಳು ಜಾತಿ ಸೂಚಕವಾಗಿರದೇ, ಗುಣವನ್ನು ಸೂಚಿಸುತ್ತವೆ ಎಂಬುದು ತಿಳಿದುಬರುತ್ತದೆ.

ವೈದಿಕವಾಙ್ಮಯದಲ್ಲಿ ಆರ್ಯ ಶಬ್ದದ ಪ್ರಯೋಗ

ವಿ ಜಾನಿಹ್ಯಾರ್ಯಾನ್ಯೇ ಚ ದಸ್ಯವೋ ಬರ್ಹಿಷ್ಮತೇ ।
ರಂಧಯಾ ಶಾಸದವ್ರತಾನ್ ॥

[ಋಗ್ವೇದ : 1–51–8]

ಈ ಮಂತ್ರದಲ್ಲಿ ಆರ್ಯರಿಗಿಂತ ಉತ್ತಮ, ಶ್ರೇಷ್ಠ–ಗುಣಯುಕ್ತ ಪರೋಪಕಾರೀ ವ್ರತವುಳ್ಳವರು ಯಾರೂ ಇಲ್ಲವೆಂಬ ಅಭಿಪ್ರಾಯವಿದ್ದು, ದಸ್ಯುಗಳನ್ನು ಅವ್ರತರೆಂದು ಕರೆಯಲಾಗಿದೆ. ಎಂದರೆ, ಮೇಲ್ಕಂಡ ಗುಣ ಗಳಿಲ್ಲದವರು, ಹಾಗೂ ಪರೋಪಕಾರೀ ಗುಣ–ವಿರೋಧಿಗಳು ದಸ್ಯುಗಳು.

ವೇದಗಳಲ್ಲಿ ಎಲ್ಲೆಲ್ಲಿ **'ಆರ್ಯ'** ಶಬ್ದ ಬಂದಿದೆಯೋ, ಅದೆಲ್ಲವೂ ಶುಭಗುಣಗಳನ್ನು ಹೊಂದಿರುವ ಮಾನವರನ್ನು ಸೂಚಿಸುತ್ತದೆ. **ಅಮರ ಕೋಶ** (2–7–3)ದಲ್ಲಿ **"ಮಾಹಾಕುಲಕುಲೀನಾರ್ಯಸಭ್ಯಸಜ್ಜನಸಾಧವಃ"**, ಎಂಬುದಾಗಿ ಆರ್ಯ ಶಬ್ದಕ್ಕೆ ಕುಲೀನ, ಸಜ್ಜನ, ಸಭ್ಯ, ಸಾಧು ಇತ್ಯಾದಿ ಪರ್ಯಾಯ ಪದಗಳನ್ನು ಕೊಡಲಾಗಿದೆ.

ಕರ್ತವ್ಯಮಾಚರನ್ ಕಾಮಮಕರ್ತವ್ಯಮನಾಚರನ್ ।
ತಿಷ್ಠತಿ ಪ್ರಕೃತಾಚಾರೋ ಯಃ ಸ ಆರ್ಯ ಇತಿ ಸ್ಮೃತಃ ॥

[**ಯೋಗವಾಸಿಷ್ಠ**, ನಿರ್ವಾಣ–ಪೂ :–126–54]

ಎಂದರೆ, ಯಾರು ಸದಾ ಕರ್ತವ್ಯನಿಷ್ಠರಾಗಿದ್ದು, ಕರ್ಮಾಚರಣೆಯಲ್ಲಿ ತೊಡಗಿರುತ್ತಾರೋ, ಮತ್ತು ಪಾಪಕರ್ಮಾಚರಣೆಯಿಂದ ದೂರವಾಗಿರು ತ್ತಾರೋ, ಅವರನ್ನು **ಯೋಗವಾಸಿಷ್ಠ**ದಲ್ಲಿ ಆರ್ಯರೆಂದು ಕರೆಯಲಾಗಿದೆ.

ವಿದ್ವಾಂಸರೊಬ್ಬರು ಕೆಳಕಂಡ ಎಂಟು ಗುಣಗಳನ್ನು ಹೊಂದಿರುವ ಮನುಷ್ಯನನ್ನು **'ಆರ್ಯ'**, ಎಂಬುದಾಗಿ ತಿಳಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜ್ಞಾನೀ ತುಷ್ಟಶ್ಚ ದಾಂತಶ್ಚ ಸತ್ಯವಾದೀ ಜಿತೇಂದ್ರಿಯಃ ।
ದಾತಾ ದಯಾಲುರ್ನಮ್ರಶ್ಚ ಸ್ಯಾದಾರ್ಯೋ ಹ್ಯಷ್ಟಭಿರ್ಗುಣೈಃ ॥

ಎಂದರೆ, ಯಾವನು ಜ್ಞಾನಿಯಾಗಿದ್ದಾನೋ, ಸದಾ ಸಂತುಷ್ಟನಾಗಿದ್ದಾನೋ, ಮನಸ್ಸನ್ನು ಸದಾ ವಶದಲ್ಲಿಟ್ಟುಕೊಂಡಿರುತ್ತಾನೋ, ಸತ್ಯವಾದೀ, ಜಿತೇಂದ್ರಿಯ, ದಾನಿ, ದಯಾಳು ಮತ್ತು ನಮ್ರತೆಯಿಂದ ಕೂಡಿದ್ದಾನೋ, ಆವನೇ 'ಆರ್ಯ' ಎನಿಸುತ್ತಾನೆ.

ಮಹಾಭಾರತದಲ್ಲಿ ಉದ್ಯೋಗಪರ್ವದ 33/117 ಮತ್ತು 118ನೇ ಶ್ಲೋಕಗಳಲ್ಲಿ ಕೆಳಕಂಡಂತೆ ಹೇಳಲಾಗಿದೆ:—

ನ ವೈರಮುದ್ದೀಪಯತಿ ಪ್ರಶಾಂತಂ ನ ದರ್ಪಮಾರೋಹತಿ
ನಾಸ್ತಮೇತಿ ।
ನ ದುರ್ಗತೋಽಸ್ಮೀತಿ ಕರೋತ್ಯಕಾರ್ಯಂ ತಮಾರ್ಯಶೀಲಂ
ಪರಮಾಹುರಾರ್ಯಾಃ ॥
ನ ಸ್ವೇ ಸುಖೇ ವೈ ಕುರುತೇ ಪ್ರಹರ್ಷಂ ನಾನ್ಯಸ್ಯ ದುಃಖೇ
ಭವತಿ ಪ್ರಹೃಷ್ಟಃ ।
ದತ್ವಾ ನ ಪಶ್ಚಾತ್ ಕುರುತೇಽನುತಾಪಂ ಸ ಕಥ್ಯತೇ
ಸತ್ಪುರುಷಾರ್ಯಶೀಲಃ ॥

ಎಂದರೆ, ಯಾವನು ಮರೆತುಹೋಗಿರುವ ದ್ವೇಷವನ್ನು ಕೆದಕುವುದಿಲ್ಲವೋ, ಯಾವನು ಅಹಂಕಾರಪಡುವುದಿಲ್ಲವೋ, ಯಾವಾಗಲೂ ನಿರಾಶನಾಗುವುದಿಲ್ಲವೋ, ಯಾವನು ತನ್ನ ಸುಖದಲ್ಲಿ ಅಧಿಕ ಪ್ರಸನ್ನತೆಯನ್ನು ಹೊಂದುವುದಿಲ್ಲವೋ, ಇನ್ನೊಬ್ಬರ ದುಃಖವನ್ನು ನೋಡಿ, ತಾನು ಸುಖಾನುಭವವನ್ನು ಹೊಂದುವುದಿಲ್ಲವೋ, ದಾನ ನೀಡಿದ ನಂತರ, ಪಶ್ಚಾತ್ತಾಪ ಪಡುವುದಿಲ್ಲವೋ, ಆವನನ್ನು ಆರ್ಯ, ಎಂದು ಕರೆಯಲಾಗಿದೆ.

ಈ ಗುಣಗಳಿರತಕ್ಕ ಯಾವ ಮನುಷ್ಯನೇ ಆಗಿರಲೀ, ಯಾವುದೇ ದೇಶ, ವಂಶ ಅಥವಾ ಕುಲದಲ್ಲಿ ಹುಟ್ಟಿದವನೇ ಆಗಿರಲೀ, ಮತ್ತು ಬಿಳಿ, ಕಪ್ಪು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಥವಾ ಗೋಧಿ ಆದಿ ಯಾವುದೇ ಬಣ್ಣ ವಿರುವವನಾಗಲೀ, ಅವನನ್ನು ಆರ್ಯ, ಎಂದು ಕರೆಯಲಾಗಿದೆ.

ಭಗವದ್ಗೀತೆ (2–2) ಯಲ್ಲಿ ವೀರ ಅರ್ಜುನನು ಮೋಹಪರವಶ ನಾಗಿ ಕ್ಷಾತ್ರಧರ್ಮಕ್ಕೆ ಚ್ಯುತಿಬರುವಂತೆ ವರ್ತಿಸಿದುದನ್ನು ನೋಡಿ, ಶ್ರೀಕೃಷ್ಣನು ಅರ್ಜುನನನ್ನು "ಅನಾರ್ಯಜುಷ್ಟ", ಎಂದು ತೆಗಳಿದ್ದಾನೆ.

ವಾಲ್ಮೀಕಿ ರಾಮಾಯಣದ ಬಾಲಕಾಂಡ(1–16)ದಲ್ಲಿ, "ಆರ್ಯಃ ಸರ್ವಸಮಶ್ಚೈವ ದೈವ ಪ್ರಿಯದರ್ಶನಃ", ಎಂದರೆ, ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವ ಮತ್ತು ಎಲ್ಲರಿಗೂ ಆಪ್ಯಾಯಮಾನನಾಗಿರುವ ರಾಮನನ್ನು 'ಆರ್ಯ', ಎಂದು ಕರೆಯಲಾಗಿದೆ. ಮತ್ತು ಅಯೋಧ್ಯಾ ಕಾಂಡ (13–5)ದಲ್ಲಿ ರಾಮನನ್ನು ಕಾಡಿಗೆ ಕಳುಹಿಸುವಂತೆ ಕೈಕೇಯಿ ಒತ್ತಾಯಿಸಿದ್ದಕ್ಕಾಗಿ ದಶರಥ ಅವಳನ್ನು 'ಅನಾರ್ಯಾ' ಎಂದು ಕರೆದಿದ್ದಾನೆ. (19–19)ರಲ್ಲಿ ಮೇಲಿನ ಕಾರಣದಿಂದಾಗಿ, ವಾಲ್ಮೀಕಿಯೇ ಸ್ವತಃ ಅವಳನ್ನು 'ಅನಾರ್ಯಾ', ಎಂದು ಕರೆದು, ನಿಂದಿಸಿದ್ದಾನೆ.

ಮಹಾತ್ಮಾ ಬುದ್ಧನೂ ಕೂಡ ಸಜ್ಜನರನ್ನು ಸಂಬೋಧಿಸುವಾಗ ಯಾವಾಗಲೂ 'ಆರ್ಯ' ಶಬ್ದವನ್ನು ಪ್ರಯೋಗಿಸುತ್ತಿದ್ದನು. ಆರ್ಯ ಶಬ್ದಕ್ಕೆ ಅವನು ಧಮ್ಮಪದ, 270 ರಲ್ಲಿ ಈ ರೀತಿ ವ್ಯಾಖ್ಯಾನ ಮಾಡಿದ್ದಾನೆ:

ನ ತೇನ ಅರಿಯೋ ಹೋತಿ ಯೇನ ಪಾಣಾನಿ ಹಿಂಸತಿ ।
ಅಹಿಂಸಾ ಸಬ ಪಾಣಾನಂ ಅರಿಯೋ ತಿ ಪವುಚ್ಚತಿ ॥

ಎಂದರೆ, ಪ್ರಾಣಿವಧೆ ಮಾಡುವವನು ಆರ್ಯನಲ್ಲ. ಎಲ್ಲ ಪ್ರಾಣಿ ಮಾತ್ರರ ಬಗ್ಗೆ ಅಹಿಂಸಾಭಾವ ತಳೆದಿರುವವನೇ ಆರ್ಯ.

ದಸ್ಯು ಶಬ್ದದ ಪ್ರಯೋಗ

'ಆರ್ಯ' ಶಬ್ದದಂತೆಯೇ 'ದಸ್ಯು' ಶಬ್ದವೂ ಕೂಡ ಗುಣಸೂಚಕ ಪದವಾಗಿದೆ. ಆದ್ದರಿಂದ, ಎಲ್ಲ ದೇಶ–ಕಾಲಗಳಲ್ಲಿಯೂ ದಸ್ಯುಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇರುತ್ತಾರೆ. ಮಹಾಭಾರತದ ಶಾಂತಿಪರ್ವ(65-23) ದಲ್ಲಿ ಹೇಳಿರುವಂತೆ—

ದುಷ್ಕಂತೇ ಮಾನುಷೇ ಲೋಕೇ ಸರ್ವವರ್ಣೇಷು ದಸ್ಯವಃ ।
ಲಿಂಗಾಂತರೇ ವರ್ತಮಾನಾ ಆಶ್ರಮೇಷು ಚತುರ್ವ್ವಪಿ ॥

ಎಲ್ಲ ಪ್ರಾಣಿವರ್ಗಗಳಲ್ಲಿಯೂ ದಸ್ಯು-ಸ್ವಭಾವದ ಜನರಿದ್ದಾರೆ.

ದಸ್ಯು ಶಬ್ದದ ಅರ್ಥ, ಹಾಗೂ ಉತ್ಪತ್ತಿ ಕೂಡ ಅದರ ಗುಣ-ಕರ್ಮ-ಸ್ವಭಾವವನ್ನೇ ಆಶ್ರಯಿಸುತ್ತದೆಂಬ ಬಗ್ಗೆ ಪುಷ್ಟಿದೊರಕುತ್ತದೆ. 'ದಸು ಉಪಕ್ಷಯೇ' ಧಾತುವಿನಿಂದ, 'ಯುಚ್' ಪ್ರತ್ಯಯ ಸೇರಿ, 'ದಸ್ಯು' ಶಬ್ದದ ಉತ್ಪತ್ತಿಯಾಗಿದೆ. ನಿರುಕ್ತ(7-23)ದಲ್ಲಿ ಇದರ ಉತ್ಪತ್ತಿಯನ್ನು ಹೀಗೆ ಹೇಳಲಾಗಿದೆ:—

'ದಸ್ಯುರ್ದಸ್ಯತೇಃ ಕ್ಷಯಾರ್ಥಾದುಪದಸ್ಯಂತ್ಯಸ್ಮಿನ್ ರಸಾ,
ಉಪದಾಸಯತಿ ಕರ್ಮಾಣಿ.'

ಎಂದರೆ, ಯಾವನು ಅಕರ್ಮ ಅಥವಾ ದುಷ್ಕರ್ಮಗಳನ್ನು ಮಾಡುತ್ತಾನೋ, ಶುಭಕರ್ಮಗಳನ್ನು ಮಾಡಲು ಹಿಂಜರಿಯುತ್ತಾನೋ, ಹಾಗೂ ಶುಭಕರ್ಮಗಳಿಗೆ ವಿಘ್ನವನ್ನು ಒಡ್ಡುತ್ತಾನೋ, ಅವನು 'ದಸ್ಯು'.

ಋಗ್ವೇದ(10-22-8)ದಲ್ಲಿ ದಸ್ಯುವಿನ ಲಕ್ಷಣವನ್ನು ಈ ರೀತಿ ಕೊಡಲಾಗಿದೆ:—

ಅಕರ್ಮಾ ದಸ್ಯುರಭಿ ನೋ ಅಮಂತುರನ್ಯವ್ರತೋ ಅಮಾನುಷಃ ।

ಎಂದರೆ, ವಿಚಾರಮಾಡಿ, ಯಾವನು ಕಾರ್ಯ ಮಾಡುವುದಿಲ್ಲವೋ, ಅಹಿಂಸಾ, ಸತ್ಯ, ದಯಾ ಇತ್ಯಾದಿ ವ್ರತಾಚರಣೆಗಳನ್ನು ಪಾಲಿಸದೇ, ತದ್ವಿರುದ್ಧವಾಗಿ ಹಿಂಸಾಚರಣೆ, ಅಸತ್ಯ, ಹಾಗೂ ಕ್ರೂರಾಚರಣೆಗಳನ್ನು ಪಾಲಿಸುತ್ತಾ, ಮಾನವೋಚಿತ ಆಚರಣೆಗಳನ್ನು ಮಾಡುವುದಿಲ್ಲವೋ, ಅವನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಸ್ಯು. ಇಂತಹ ಅಮಾನವೀಯ ಮತ್ತು ಅಸಾಮಾಜಿಕ ಗುಣಗಳನ್ನುಳ್ಳವರನ್ನು ವೇದಗಳಲ್ಲಿ ದಸ್ಯುಗಳೆಂದು ಕರೆದಿದ್ದು, ಅವರನ್ನು ತೊಡೆದುಹಾಕಲು ಶ್ರಮಿಸಬೇಕೆಂದೂ ಸೂಚಿಸಲಾಗಿದೆ.

ಈ ಸಂದರ್ಭದಲ್ಲಿ ಕೆಳಕಂಡ ಋಗ್ವೇದ ಮಂತ್ರ (6–22–10) ವಿಶೇಷತಃ ಉಲ್ಲೇಖನೀಯವಾಗಿದೆ:—

ಆ ಸಂಯತಮಿಂದ್ರ ಣಃ ಸ್ವಸ್ತಿಂ ಶತ್ರುತೂರ್ಯಾಯ
ಬೃಹತೀಮಮೃಧ್ರಾಮ್ ।
ಯಯಾ ದಾಸಾನ್ಯಾರ್ಯಾಣಿ ವೃತ್ರಾ ಕರೋ ವಜ್ರಿನ್
ಸುತುಕಾ ನಾಹುಷಾಣಿ ॥

ಧರ್ಮಕಾರ್ಯದಲ್ಲಿ ವಿಘ್ನ ಒಡ್ಡುವಂತಹ, ಹಾಗೂ ಅಂತಹ ಕಾರ್ಯಗಳನ್ನು ನಾಶಗೊಳಿಸುವಂತಹ ದಾಸ ಅಥವಾ ದಸ್ಯುಗಳನ್ನೂ ಆರ್ಯ ಅಥವಾ ಶ್ರೇಷ್ಠ ಅಥವಾ ಸದಾಚಾರಿ ಜನರನ್ನಾಗಿ ಮಾಡಬೇಕೆಂದು, ಈ ಮಂತ್ರದಲ್ಲಿ ಇಂದ್ರ, ಎಂದರೆ ರಾಜರಿಗೆ ಹೇಳಲಾಗಿದೆ. ಕರ್ಮಹೀನ ಮನುಷ್ಯ(ದಾಸ ಅಥವಾ ದಸ್ಯು)ರನ್ನೂ ಶ್ರೇಷ್ಠ ಮನುಷ್ಯರನ್ನಾಗಿ ಮಾಡುವುದು ಇಂದ್ರನ ಕರ್ತವ್ಯ, ಎಂಬುದಾಗಿ ಮೇಲಿನ ಮಂತ್ರಕ್ಕೆ ಸಾಯಣಾಚಾರ್ಯರು ಅರ್ಥ ಮಾಡಿದ್ದಾರೆ. ಆರ್ಯ–ದಸ್ಯುಗಳಲ್ಲಿನ ಅಂತರಕ್ಕೆ ಅವರವರ ಕರ್ಮಾಚರಣೆಯೇ ಕಾರಣವೆಂಬುದು ಇದರಿಂದ ಸ್ಪಷ್ಟವಾಗುತ್ತದೆ; ಜಾತಿಯಲ್ಲ!

ಮನುಸ್ಮೃತಿ (10–45)ಯಲ್ಲಿ ಹೀಗೆ ಹೇಳಲಾಗಿದೆ:—

ಮುಖಬಾಹೂರುಪಜ್ಜಾನಾಂ ಯಾ ಲೋಕೇ ಜಾತಯೋ ಬಹಿಃ।
ಮ್ಲೇಚ್ಛವಾಚಶ್ಚಾರ್ಯವಾಚಃ ಸರ್ವೇ ತೇ ದಸ್ಯವಃ ಸ್ಮೃತಾಃ॥

ಬ್ರಾಹ್ಮಣಾದಿ ವರ್ಗದವರು ಶ್ರೇಷ್ಠ ಕರ್ಮಗಳನ್ನು ಮಾಡದಿರುವ ಕಾರಣದಿಂದ ಬಹಿಷ್ಕೃತರಾಗಿದ್ದು, ಅವರು ಆರ್ಯಭಾಷೆ ಮಾತನಾಡುವವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಗಲೀ ಅಥವಾ ಮ್ಲೇಚ್ಛಭಾಷೆ ಮಾತನಾಡುವವರಾಗಲೀ, ಅವರೆಲ್ಲರನ್ನೂ ದಸ್ಯುಗಳೆಂದೇ ಕರೆಯಲಾಗಿದೆ. ಆರ್ಯರಲ್ಲಿನ ದುಷ್ಟ ಜನರನ್ನೂ ದಸ್ಯುಗಳೆಂದೇ ಕರೆಯಲಾಗಿರುವುದರಿಂದ, ದಸ್ಯು ಶಬ್ದ ಜಾತಿವಾಚಕವಲ್ಲವೆಂಬುದು ಸ್ಪಷ್ಟವಾಗುತ್ತದೆ.

ಹೀಗಿದ್ದರೂ ಕೂಡ, "ದಾಸ, ದಸ್ಯು ಶಬ್ದಗಳು ವಾಸ್ತವವಾಗಿ ಕಪ್ಪುವರ್ಣದ ಆದಿವಾಸಿಗಳ ಹೆಸರುಗಳಾಗಿವೆ.", ಎಂದು ಮೆಕ್ಡೊನಾಲ್ ಸೂಚಿಸಿದ್ದಾನೆ.

ಋಗ್ವೇದ (1-10-1) ಮಂತ್ರಕ್ಕೆ ಟಿಪ್ಪಣಿ ಬರೆಯುತ್ತಾ ಗ್ರಿಫಿತ್—"ಆರ್ಯರನ್ನು ವಿರೋಧಿಸುತ್ತಿದ್ದ ಕಪ್ಪನೆಯ ಆದಿವಾಸಿಗಳನ್ನು ದಾಸ ಅಥವಾ ದಸ್ಯು ಎಂದು ಕರೆಯಲಾಗುತ್ತದೆ.", ಎಂದು ತಿಳಿಸಿದ್ದಾನೆ.

ಭಾರತದಲ್ಲಿನ ಆದಿವಾಸಿಗಳೇ ಕಪ್ಪುಜನರೆಂದು ಸಿದ್ಧಪಡಿಸಲು ಅವನು ಋಗ್ವೇದಲ್ಲಿ 'ಕೃಷ್ಣ' ಎಂಬ ಶಬ್ದವಿರುವ (1-101-1), (1-130-8), (2-20-7) (4-16-13) (6-47-21) ಮತ್ತು (7-5-3)—ಈ ಆರು ಮಂತ್ರಗಳನ್ನು ಉದಾಹರಿಸಿದ್ದಾನೆ. ಆದರೆ, ವಾಸ್ತವಿಕವಾಗಿ ಈ ಮಂತ್ರಗಳಲ್ಲಿ ಭಿನ್ನ ಭಿನ್ನ ಪ್ರಕಾರದ ಮೇಘಗಳ ವರ್ಣನೆ ಮಾತ್ರ ಇದ್ದು, ಆ ವರ್ಣನೆ ಮನುಷ್ಯರಿಗೆ ಅನ್ವಯಿಸುವುದಿಲ್ಲ. ಹೇಗೆಂದರೆ, 'ಕೃಷ್ಣಗರ್ಭಾಃ' ಇದರ ಅರ್ಥವನ್ನು ಸ್ಕಂದಸ್ವಾಮಿ ಹೀಗೆ ಮಾಡಿದ್ದಾರೆ:—

"ವೃಷ್ಟಿಲಕ್ಷಣಾ ಆಪಃ ಕೃಷ್ಣಗರ್ಭಾಃ ಮೇಘಸ್ಯ ಗರ್ಭಭೂತತ್ವಾತ್".

ಎಂದರೆ, 'ಕಪ್ಪು ಬಣ್ಣದಿಂದ ಕೂಡಿದ ಮೋಡಗಳನ್ನು ಕೃಷ್ಣಗರ್ಭಾಃ' ಎಂದು ಹೇಳಲಾಗುತ್ತದೆ. ದಸ್ಯುಗಳ ನಾಯಕರೆಂದು ಹೇಳಲಾಗುವ ಇಲೀವಿಶ, ಶಂಬರ, ಚುಮುರಿ, ಧುನಿ, ವರ್ಚಿನ್, ಆದಿ ಹೆಸರುಗಳೂ ವೇದಗಳಲ್ಲಿ ಬಂದಿದ್ದು, ಅವುಗಳೂ ಕೂಡ ವಿವಿಧ ಪ್ರಕಾರದ ಮೋಡಗಳಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅನೇಕ ವೇದ ಮಂತ್ರಗಳಲ್ಲಿ ಇಂದ್ರನನ್ನು 'ವೃತ್ರಹಾ' ಎಂದರೆ, ವೃತ್ರನನ್ನು ನಾಶಮಾಡುವವನು, ಎಂದು ಕರೆಯಲಾಗಿದೆ. ವೇದಗಳಲ್ಲಿ ಮೋಡ ಗಳನ್ನು 'ವೃತ್ರ' ಎಂದಿದ್ದು, ಅವುಗಳನ್ನು ಚದುರಿಸಿ, ಮಳೆ ಬರುವಂತೆ ಮಾಡುವುದರಿಂದ, ಸೂರ್ಯನನ್ನು ಮತ್ತು ವಿದ್ಯುತ್ತನ್ನು ಇಂದ್ರ ಎಂದು ಕರೆಯಲಾಗಿದೆ.

ವೇದಾರ್ಥದೀಪಿಕಾ–ನಿರುಕ್ತದ ರಚನಾಕಾರರಾದ ಯಾಸ್ಕಾಚಾರ್ಯರು ಈಗ್ಗೆ ಸುಮಾರು ಐದು ಸಾವಿರ ವರ್ಷಗಳ ಹಿಂದೆಯೇ ಕೆಳಕಂಡಂತೆ ಬರೆದಿದ್ದಾರೆ;—

"ಅಪಾಂ ಜ್ಯೋತಿಷಶ್ಚ ವಿಮಿಶ್ರೀಭಾವಕರ್ಮಣೋ ವರ್ಷಕರ್ಮ ಜಾಯತೇ ।
ತತ್ರೋಪಮಾರ್ಥೇನ ಯುದ್ಧವರ್ಣಾ ಭವಂತಿ॥"

ಎಂದರೆ, ಇಲ್ಲಿ ಯುದ್ಧಸೂಚಕ ವಿಷಯದ ವರ್ಣನೆ ಮಳೆಗೆ ಸಂಬಂಧಿ ಸಿದುದಾಗಿದೆ. ವೇದದ ಕಾವ್ಯಾತ್ಮಕ ಶೈಲಿಯನ್ನು ತಿಳಿಯಲಾರದ ಪಾಶ್ಚಾತ್ಯರು ವೇದಗಳಲ್ಲಿ ಬಂದಿರುವ ಶಬ್ದಗಳನ್ನು ಅಥವಾ ಮಂತ್ರ ಗಳನ್ನು ಅರ್ಥಹೀನವಾಗಿ ಬರೆದು, ವಿರೂಪಗೊಳಿಸಿದ್ದಾರೆ.

ಪಾಶ್ಚಾತ್ಯ ಮತವಾದಿಗಳು 'ಶಿಶ್ನದೇವಾಃ' ಶಬ್ದಕ್ಕೆ ಅರ್ಥಮಾಡಿ, ಆದಿವಾಸಿಗಳು ಲಿಂಗಪೂಜಕರಾಗಿದ್ದರು, ಎಂದು ತೋರಿಸಲು ಪ್ರಯತ್ನಿಸಿ ದ್ದಾರೆ. ಅವರ ಈ ಅರ್ಥ ಭ್ರಮಾಸ್ಪದವಾಗಿದ್ದು, ಅದರ ಸರಿಯಾದ ಅರ್ಥ ಹೀಗಿದೆ:—

'ಶಿಶ್ನೇನ ಉಪಸ್ಥೇಂದ್ರಿಯೇಣ ದೀವ್ಯಂತಿ ಕ್ರೀಡಂತಿ ಇತಿ ಶಿಶ್ನದೇವಾಃ'.

ಎಂದರೆ, ಕಾಮೀ, ಭೋಗಿ, ಹಾಗೂ ವ್ಯಭಿಚಾರೀ ಪುರುಷನನ್ನು ವೇದಗಳಲ್ಲಿ 'ಶಿಶ್ನದೇವಾಃ', ಎಂದು ಕರೆಯಲಾಗಿದೆ. ಋಗ್ವೇದದ (7-21-5)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಂತ್ರಕ್ಕೆ ವ್ಯಾಖ್ಯಾನ ಮಾಡುತ್ತಾ ಯಾಸ್ಕಾಚಾರ್ಯರು 'ಶಿಶ್ನದೇವಾಃ' ಶಬ್ದಕ್ಕೆ 'ಅಬ್ರಹ್ಮಚಾರ್ಯಾಃ' (ನಿರುಕ್ತ 4-19)-ಎಂದರೆ, ಬ್ರಹ್ಮಚರ್ಯ ಪಾಲಿಸದವನು ಎಂದು ನೇರವಾದ ಅರ್ಥವನ್ನು ನೀಡಿದ್ದಾರೆ. ಈ ಶಬ್ದ ಋಗ್ವೇದದ (7-21-5) ಮತ್ತು (10-99-3)-ಈ ಎರಡೂ ಮಂತ್ರಗಳಲ್ಲಿ ಬಂದಿದ್ದು, ಅವುಗಳಲ್ಲಿ ಪ್ರಜಾಪೀಡಕರು, ಹಾಗೂ ವಂಚಕರು, ಕುಟಿಲರು **ಶಿಶ್ನದೇವ** = ವ್ಯಭಿಚಾರೀ, ಎಂದರೆ ದುಷ್ಟಜನರು ನಮ್ಮ ಯಜ್ಞ = ಧಾರ್ಮಿಕ ಕಾರ್ಯಗಳಲ್ಲಿ ವಿಘ್ನ ಒಡ್ಡದಂತೆ ಮಾಡಬೇಕೆಂದು ಇಂದ್ರನನ್ನು ಪ್ರಾರ್ಥಿಸಲಾಗಿದೆ. ಈ ಮಂತ್ರಗಳಲ್ಲಿ ಪೂಜೆಯ ವಿಷಯವೇ ಬಂದಿಲ್ಲ. ಯಾವುದೇ ದೇಶದಲ್ಲಿನ, ಯಾವುದೇ ಕಾಲದಲ್ಲಿನ, ಅಥವಾ ಯಾವುದೇ ಸಮಾಜದಲ್ಲಿನ ಸ್ವೇಚ್ಛಾಚಾರಿ ಅಥವಾ ವ್ಯಭಿಚಾರೀ ಮನುಷ್ಯನನ್ನು 'ಶಿಶ್ನದೇವ' ಎಂಬ ಹೆಸರಿನಿಂದ ಕರೆಯಬಹುದು.

ವೇದಗಳಲ್ಲಾದರೋ, **ಅವ್ರತ** (ಒಳ್ಳೆಯ ವ್ರತಾಚರಣೆ ಇಲ್ಲದವರು), **ಅನ್ಯವ್ರತ** (ಆಚರಿಸಬಾರದ ವ್ರತವನ್ನಾಚರಿಸುವವರು), **ಅಯಜ್ಯು** (ಯಜ್ಞಾಚರಣೆಯನ್ನಾಚರಿಸದವರು), **ಅಕರ್ಮನ್** (ಕರ್ಮ ಮಾಡದವರು) **ಅಮಾನುಷ** (ಮಾನವೀಯತೆ ಇಲ್ಲದವರು), **ಅದೇವಯುಃ** (ದೇವಜನರಲ್ಲದವರು), **ಕುಪೀದೀ** (ಧನವಾಹಿಗಳು)-ಇಂತಹವರು ಅವರು ಯಾವ ಜಾತಿಗೇ ಸೇರಿರಲೀ, ಅಥವಾ ಯಾವ ವರ್ಗದವರೇ ಆಗಿರಲೀ, ಅವರನ್ನು **ದಸ್ಯುಗಳೆಂದು** ಕರೆಯಲಾಗಿದೆ. ರಾಜನೀತಿಕ ಕಾರಣಗಳಿಗಾಗಿ ಪಾಶ್ಚಾತ್ಯ ವಿದ್ವಾಂಸರು ಭಾರತೀಯರಲ್ಲಿ ಆಂತಃಕಲಹ ಮೂಡಿಸುವ ಉದ್ದೇಶ್ಯದಿಂದಲೇ, ವೇದ ಮಂತ್ರಗಳಿಗೆ, ಹಾಗೂ ವೈದಿಕ ಶಬ್ದಗಳಿಗೆ ಅವರದೇ ಅರ್ಥವನ್ನು ಕಲ್ಪಿಸಿದ್ದಾರೆ.

ವೇದಗಳಲ್ಲಿ 'ಅನಾಸಃ' ಶಬ್ದ ಬಂದಿದ್ದು, ಅದಕ್ಕೆ ಮೂಗಿಲ್ಲದವರು ಅಥವಾ ಚಪ್ಪಟೆ ಮೂಗುಳ್ಳವರು, ಎಂದು ಪಾಶ್ಚಾತ್ಯ ಮತವಾದಿಗಳು ಅರ್ಥ ಮಾಡಿದ್ದಾರೆ. ಅವರ ಈ ಕಲ್ಪಿತ ಅರ್ಥ ನಿರಾಧಾರ. 'ನಾಸ್', ಎಂದರೆ ನಾಸಿಕ ಎಂದಲ್ಲ. ಆದರೆ, ಅದು ಶಬ್ದಕ್ಕೆ ಸಂಬಂಧಿಸಿದ 'ಣಾಸ್ ಶಬ್ದೇ' ಧಾತುವಿನೊಡನೆ "ನಾಸತೇ ಶಬ್ದಂ ಕರೋತಿ ಇತಿ ನಾಃ(ನಾಸ್)"-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದರೆ, ಯಾವುದು ಶಬ್ದ ಮಾಡುತ್ತದೋ, ಅದು 'ನಾಸ್'; 'ನ ಶಬ್ದಂ ಕರೋತಿ ಇತಿ ಅನಾಸ್',ಎಂದರೆ ಯಾವುದು ಶಬ್ದವನ್ನು ಮಾಡುವುದಿಲ್ಲವೋ, ಅದು 'ಅನಾಸ್'. ಋಗ್ವೇದದ ಯಾವ ಮಂತ್ರ (5–29–10) ದಲ್ಲಿ ಈ ಶಬ್ದ ಬಂದಿದೆಯೋ, ಅದು ಮೋಡವನ್ನು ಸೂಚಿಸುವ ಪ್ರಕರಣವಾಗಿದ್ದು, ಆ ಶಬ್ದ ಮೋಡಗಳನ್ನು ಸೂಚಿಸುವ ವಿಶೇಷಣರೂಪದಿಂದ ಕೂಡಿದ್ದು, ಗುಡುಗುವ ಮೋಡಗಳೆಂಬುದು ಅದರ ಅರ್ಥ. ಘ್ರಾಣೇಂದ್ರಿಯ ರೂಪಕವಾದ ನಾಸಿಕಾ ಅಥವಾ ಚಪ್ಪಟೆ ಮೂಗು ಅಥವಾ ಇನ್ನಾವುದೇ ಅರ್ಥ ಈ ಶಬ್ದಕ್ಕೆ ಸಂಬಂಧಿಸಿರುವುದಿಲ್ಲ.

ದುರ್ಭಾಗ್ಯವಶಾತ್ ಪ್ರಸಕ್ತ, ಹಾಗೂ ಮುಂದಿನ ಪೀಳಿಗೆಯವರು, ವೇದಕಾಲೀನ ಆರ್ಯರ ಮತ್ತು ಆ ಕಾಲಕ್ಕೆ ಸಂಬಂಧಿಸಿರುವಂತೆ ನಿರೂಪಿಸಿರುವ ಇತಿಹಾಸದ ಚಿತ್ರಣವನ್ನು ಓದಿದಲ್ಲಿ. ಹಾಗೂ ಕೇಳಿದಲ್ಲಿ, ಯಾರೊಬ್ಬರಿಗಾಗಲೀ ಪ್ರಾಚೀನ ಭಾರತದ ಬಗ್ಗೆ ಗೌರವದ ಭಾವನೆ ಮೂಡುವುದಿಲ್ಲ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಈಗ ಯಾವ ವಿಷಯವನ್ನು ಕಲಿಸಲಾಗುತ್ತಿದೆಯೋ, ಅದೆಲ್ಲವೂ Made in England (ಇಂಗ್ಲೆಂಡಿನಲ್ಲಿ ತಯಾರಾದದ್ದು) ಆಗಿದೆ. ಈ ಸಂದರ್ಭದಲ್ಲಿ ಭಾರತದ ಸುಪ್ರಸಿದ್ಧ ವೈಜ್ಞಾನಿಕರೂ, ಶಿಕ್ಷಣವೇತ್ತರೂ, ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಅಂದಿನ ಅಧ್ಯಕ್ಷರಾಗಿದ್ದ ಡಾ॥ ಡಿ. ಎಸ್. ಕೋಠಾರಿ ಅವರು 1969ರಲ್ಲಿ ದೆಹಲಿಯಲ್ಲಿ ನಡೆದ ಅಂತರರಾಷ್ಟ್ರೀಯ ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನ ಸಮ್ಮೇಳನದಲ್ಲಿ ಮಾಡಿದ ಸಮಾರೋಪಭಾಷಣವನ್ನು ದಿನಾಂಕ 18–1–1969ರ 'ದಿ ಟ್ರಿಬ್ಯೂನ್' ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು, ಅದರ ಉದ್ಧೃತ ಭಾಗವನ್ನು ಇಲ್ಲಿ ಉದಾಹರಿಸುವುದು ಸಮಂಜಸವಾಗಿದೆ:—

"ಭಾರತದ ಬೌದ್ಧಿಕಜೀವನದ ಆಕರ್ಷಣ ಕೇಂದ್ರವು ಭಾರತದ ಹೊರಗಿರುವುದಕ್ಕೆ ವಿಷಾದಿಸುತ್ತೇನೆ. ಭಾರತದ ಹೊರಗೆ ಏನು ನಡೆಯುತ್ತದೋ, ಅದರಿಂದಲೇ ಬಹುಮಟ್ಟಿಗೆ ನಾವು ಪ್ರಭಾವಿತರಾಗುತ್ತಿದ್ದೇವೆ. ಭಾರತೀಯ ವಿಶ್ವವಿದ್ಯಾಲಯಗಳು ವಿದೇಶೀ ಸಂಸ್ಕೃತಿಯನ್ನೇ ಬೆಳೆಸಿಕೊಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಂದಿದ್ದು, ಇನ್ನೂ ಭಾರತೀಯ ಸಂಸ್ಕೃತಿಗೆ ಹೊಂದಿ ಕೊಂಡಿರುವುದಿಲ್ಲ. ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿನ ಪವಿತ್ರ ವಿಚಾರಧಾರೆಗಳಿಗೆ ದೇಶದ ವಿಶ್ವ ವಿದ್ಯಾಲಯ ಶಿಕ್ಷಣದಲ್ಲಿ ಸ್ಥಾನ ದೊರತ್ತಿಲ್ಲ. ಈ ದೇಶ ತನ್ನ ಪುರಾತನ ಸಂಸ್ಕೃತಿಯನ್ನು ಮತ್ತೆ ಹುಡುಕಿ ಕೊಳ್ಳಬೇಕಾಗಿದೆ."

ಈ ರೀತಿಯಾಗಿ ದೇಶದ ಬೌದ್ಧಿಕಜೀವನದ ಆಕರ್ಷಣ ಕೇಂದ್ರ ಇಂದಿಗೂ ಭಾರತದ ಹೊರಗಿದ್ದು, ಅಲ್ಲಿ ಏನು ನಡೆಯುತ್ತದೋ, ಅದರಿಂದ, ಬಹುಶಃ ನಾವು ಪ್ರಭಾವಿತರಾಗುತ್ತಿದ್ದೇವೆ. ವಿದೇಶೀಯರು ಪ್ರಾರಂಭಿಸಿದ್ದ ಭಾರತೀಯ ವಿಶ್ವವಿದ್ಯಾಲಯಗಳು ಭಾರತೀಯ ಸಂಸ್ಕೃತಿಗೆ ಹೊಂದಿ ಕೊಳ್ಳದೇ, ಇನ್ನೂ ಹಿಂದಿನ ಜಾಡಿನಲ್ಲಿಯೇ ಸಾಗುತ್ತಿವೆ. ನಮ್ಮ ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿನ ಪವಿತ್ರ ವಿಚಾರಧಾರೆಗಳಿಗೆ ನಮ್ಮೀ ದೇಶದ ವಿಶ್ವ ವಿದ್ಯಾಲಯ ಶಿಕ್ಷಣ ಪದ್ಧತಿಯಲ್ಲಿ ಇನ್ನೂ ಸ್ಥಾನ ದೊರೆತಿಲ್ಲ. ನಮ್ಮ ದೇಶ ತನ್ನ ಪುರಾತನ ಸಂಸ್ಕೃತಿಯನ್ನು ಮತ್ತೆ ಹುಡುಕಿ ಕೊಳ್ಳಬೇಕಾಗಿದೆ.

ಆದರೆ, ಡಾ॥ ಕೋತಾರಿ ಅಂತಹ ಮನೀಷಿಗಳು ಎಚ್ಚರಿಕೆ ನೀಡಿದಾಗ್ಯೂ, ವಾಸ್ತವವಾಗಿ ದೇಶದಲ್ಲಿ ಏನಾಗುತ್ತಿದೆ, ಎಂಬುದು ದಿನಾಂಕ 15-5-1979ರಂದು ದೆಹಲಿಯಲ್ಲಿ ಸಮಾವೇಶಗೊಂಡಿದ್ದ 'ಭಾರತೀಯ ಇತಿಹಾಸ ಮತ್ತು ಸಾಂಸ್ಕೃತಿಕ ಸಂಘ'ದ ವಾರ್ಷಿಕಾಧಿವೇಶನದ ಸಂದರ್ಭದಲ್ಲಿ ಕಾಶೀ ಹಿಂದೂ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ॥ ಲಲ್ಲನ್‌ಜೀ ಗೋಪಾಲ್ ಅವರ ಕೆಳಕಂಡ ವಚನದಿಂದ ತಿಳಿದುಬರುತ್ತದೆ:—

"ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷ ಸರ್ಕಾರವನ್ನು ರಚಿಸುವುದಕ್ಕೆ ಮೊದಲು, ಇಪ್ಪತ್ತು ವರ್ಷಗಳವರೆಗೆ ಚೀನೀಯ ಜನ-ಜೀವನದ ಘಟ್ಟವನ್ನು ಮಾರ್ಕ್ಸ್‌ವಾದಕ್ಕನುಗುಣವಾಗಿ ವಿವರಿಸುವಂತಹ ಗ್ರಂಥಗಳ ಯೋಜನಾಬದ್ಧ ತಯಾರಿಕಾ ಆಂದೋಳನವನ್ನು ಕಮ್ಯುನಿಸ್ಟ್ ಪಕ್ಷ ಪ್ರಾರಂಭಿಸಿದ್ದಿತು. ಮಾನವ ವ್ಯವಹಾರಗಳ ವಿವಿಧ ಹಂತಗಳಲ್ಲಿ ಯಥಾರ್ಥವನ್ನು ಮಾರ್ಕ್ಸ್‌ನ ವಿವರಣೆಯ ಮೇರೆಗೆ ಗ್ರಹಿಸುವಂತೆ, ಅಲ್ಲಿನ ಜನರ ಮನಸ್ಸನ್ನು ಅಣಿಗೊಳಿಸುವುದೇ ಇದರ ಹಿನ್ನೆಲೆಯಾಗಿದ್ದಿತು. ಅಂಥದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಯತ್ನವನ್ನು ಭಾರತೀಯ ಇತಿಹಾಸಕಾರರೂ ಮಾಡುತ್ತಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ಭಾರತೀಯ ಐತಿಹಾಸಿಕ ಕಾಂಗ್ರೆಸ್ ವಿಭಾಗದ ಸಂಯುಕ್ತ ಕಾರ್ಯದರ್ಶಿಯಾಗಿರುವ ಡಾ॥ ಡಿ. ಎನ್. ಝಾ ಅವರು ಮತ್ತು ಅವರ ಸಹೋದ್ಯೋಗಿಗಳು ತಮ್ಮ ಸಾಮ್ಯವಾದೀ ದೃಷ್ಟಿಕೋಣವನ್ನು ಬಚ್ಚಿಡದೇ, ಐತಿಹಾಸಿಕ ಘಟನೆಗಳನ್ನು ಮಾರ್ಕ್ಸ್‌ವಾದಕ್ಕನುಸಾರವಾಗಿಯೇ ವಿವರಿಸುವ ಕಾರ್ಯದಲ್ಲಿ ತೊಡಗುವುದಾಗಿ ಹೇಳಿದರು."

[ಇಂಡಿಯನ್ ಎಕ್ಸ್‌ಪ್ರೆಸ್ : ಫೆಬ್ರುವರಿ 14-15, 1979]

ಈ ರೀತಿಯಾಗಿ, ಚೀನಾದಲ್ಲಿ ಮಾನವನ ವ್ಯವಹಾರಗಳ ವಿವಿಧ ಹಂತದಲ್ಲಿ ಮಾರ್ಕ್ಸ್‌ವಾದವನ್ನು ಗ್ರಹಿಸುವಂತೆ ಜನರ ಮನಸ್ಸನ್ನು ಅಣಿಗೊಳಿಸುವಂತಹದೇ ಪ್ರಯತ್ನವನ್ನು ಭಾರತೀಯ ಇತಿಹಾಸಕಾರರು ಸಮಯಾನುಸಾರವಾಗಿ ಕೈಕೊಳ್ಳುವ ಕಾರ್ಯದಲ್ಲಿ ತೊಡಗಿದ್ದಾರೆ.

ಭಾರತೀಯ ಇತಿಹಾಸಕ್ಕೆ ಈಗ ಸಾಮ್ಯವಾದೀ ರೂಪರೇಷೆಗಳನ್ನು ಕೊಡಲಾಗುತ್ತಿದೆ, ಎಂಬುದು ಇದರ ಭಾವನೆಯಾದರೆ; ಮತ್ತೊಂದು ಕಡೆ ಭಾರತ ಸರ್ಕಾರದವರು ದೇಶದ ಇತಿಹಾಸವನ್ನು ವಿಕೃತಗೊಳಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದವರ ಮೇಲ್ವಿಚಾರಣೆಯಲ್ಲಿ ಸರ್ಕಾರಗಳ ಸಹಯೋಗದೊಡನೆ, ಪಾಠ್ಯಕ್ರಮಗಳಲ್ಲಿನ ಅನಪೇಕ್ಷಣೀಯ ಗ್ರಂಥಗಳನ್ನು ತೆಗೆದುಹಾಕುವ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ರಾಷ್ಟ್ರೀಯ ಪರಿಷತ್ತಿನವರು ಇತಿಹಾಸವನ್ನು ರೂಪಿಸುವ ಬಗ್ಗೆ ಈಗ ನೀಡಿರುವ ಸೂಚನೆಗಳನ್ನು ಅನುಸರಿಸಿದಲ್ಲಿ, ಶಾಲೆಗಳಲ್ಲಿ ಇನ್ನು ಮುಂದೆ ಕಲಿಸುವ ಇತಿಹಾಸ ಕೇವಲ ನಿರರ್ಥಕವಾಗುವುದಲ್ಲದೇ, ಇತಿಹಾಸದ ಸತ್ಯಾನ್ವೇಷಣಾ ಕಾರ್ಯವೂ ಸುದೇಹಾಸ್ಪದವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ—ಗುಪ್ತಸಾಮ್ರಾಜ್ಯದ ಅವಧಿಯನ್ನು ಭಾರತೀಯ ಇತಿಹಾಸದ 'ಸ್ವರ್ಣಯುಗ' ವೆಂದೂ, ಔರಂಗಜೇಬನನ್ನು ಇಸ್ಲಾಮಿನ 'ಧ್ವಜವಾಹಕ'ನೆಂದೂ ವರ್ಣಿಸಲು ಸಾಧ್ಯವಾಗುವುದಿಲ್ಲ. ಇಸ್ಲಾಮಿನ ಆಡಳಿತಗಾರರನ್ನು ವಿದೇಶಿಗಳೆಂದು ಹೇಳಲಾಗುವುದಿಲ್ಲ. ಅಂತೆಯೇ ಯಾವುದೇ ಸಾಮ್ರಾಜ್ಯದ ಅವಧಿಯನ್ನು 'ಸ್ವರ್ಣಯುಗ' ಅಥವಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

'ಅಂಧಕಾರಯುಗ', ಎಂದು ಕರೆಯುವುದೂ ಅಂಗೀಕಾರಾರ್ಹವಲ್ಲ. ಹೊಸದಾಗಿ ನೀಡಿರುವ ಸೂಚನೆಗಳನ್ನು ಅನುಸರಿಸಿದಲ್ಲಿ, ಮಹಾರಾಷ್ಟ್ರದ ಪಠ್ಯಪುಸ್ತಕಗಳಲ್ಲಿ ಶಿವಾಜಿಗೆ ಯಾವ ವಿಶಿಷ್ಟ ಸ್ಥಾನಮಾನವನ್ನೂ ಕೊಡಲಾಗುವುದಿಲ್ಲ.

['ನವಭಾರತ್ ಟೈಮ್ಸ್', ದೆಹಲಿ : 25-1-1982]

ಮೊದಲಿಗೆ ನಮ್ಮ ಇತಿಹಾಸವನ್ನು ಮುಸಲ್ಮಾನರು ನಾಶಗೊಳಿಸಿದರು. ನಂತರ, ಆಂಗ್ಲರು ವಿಕೃತಗೊಳಿಸಿದರು. ಈಗ ಸಮಾಜವಾದಿಗಳೊಂದು ಕಡೆ; ಹಾಗೂ ಭಾರತ ಸರ್ಕಾರ ಮತ್ತೊಂದು ಕಡೆ ! ಹೀಗೆ, ಅವರವರಿಗೆ ಬೇಕಾದ ರೀತಿಯಲ್ಲಿ ಕತ್ತರಿ ಪ್ರಯೋಗ ನಡೆಸುವ ಭರದಲ್ಲಿದ್ದಾರೆ. ವಿಷಯಗಳ ನೈಜ ಚಿತ್ರಣವನ್ನು ಇದ್ದದ್ದು ಇದ್ದ ಹಾಗೇ ನಿರೂಪಿಸುವುದು ಇತಿ+ಹ+ಆಸ= ಇತಿಹಾಸ. ಅಲ್ಲದೇ ಯಾವುದೋ ಕಾರಣಕ್ಕಾಗಿ ನೈಜ ವಿಷಯವನ್ನು ವಿಕೃತ ಅಥವಾ ವಿರೂಪ ಗೊಳಿಸುವುದು ಬೌದ್ಧಿಕ ಮೌಲ್ಯದ ಆತ್ಮಘಾತವಾಗುತ್ತದೆ ! ಕಾಲಾಂತರದಲ್ಲಿ ನಿನ್ನಿನ ಭಾರತ ಏನಾಗಿತ್ತದೆಂಬುದನ್ನು ಊಹಿಸುವುದೂ ಕಷ್ಟವಾಗುತ್ತದೆ!

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

(ಮನುಷ್ಯರ ಪ್ರಥಮ ಸೃಷ್ಟಿ 'ತ್ರಿವಿಷ್ಟಪ'ದಲ್ಲಿ)

ಪ್ರಶ್ನೆ :—ಮಾನವರ ಆದಿಸೃಷ್ಟಿ ಯಾವ ಸ್ಥಳದಲ್ಲಿ ಆಯಿತು ?

ಉತ್ತರ :—ಯಾವುದನ್ನು 'ಟಿಬೆಟ್' ಎನ್ನುತ್ತಾರೋ, ಆ 'ತ್ರಿವಿಷ್ಟಪ'ದಲ್ಲಿ.

ಪ್ರಶ್ನೆ :—ಆದಿಸೃಷ್ಟಿಯಲ್ಲಿ ಒಂದು ಜಾತಿಯಿದ್ದಿತೋ, ಅಥವಾ ಅನೇಕವೋ ?

ಉತ್ತರ :—ಒಂದು ಮಾನವ ಜಾತಿಯಿದ್ದಿತು. ಆ ಮೇಲೆ—

"ಏ ಜಾನೀಹ್ಯಾರ್ಯಾನ್ ಯೇ ಚ ದಸ್ಯವಃ."—ಇದು ಋಗ್ವೇದದ [1.51.8] ವಚನವಾಗಿದೆ.

ಶ್ರೇಷ್ಠರ ಹೆಸರು ಆರ್ಯ, ವಿದ್ವಾಂಸ, ದೇವ ಎಂದೂ, ಮತ್ತು ದುಷ್ಟರ ಹೆಸರು ದಸ್ಯು, ಎಂದರೆ ದರೋಡೆಕೋರ, ಮೂರ್ಖ ಎಂದೂ ಆಗಿರುವುದರಿಂದ ; ಆರ್ಯ, ಮತ್ತು ದಸ್ಯು-ಎಂದು ಎರಡು ಹೆಸರುಗಳಾದವು.

"ಉತ ಶೂದ್ರ ಉತಾರ್ಯೇ."—ಇದು ಋಗ್ವೇದದ ವಚನವಾಗಿದೆ.

ಆರ್ಯರಲ್ಲಿ ಮೊದಲು ಹೇಳಿದ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ, ಎಂದು ನಾಲ್ಕು ಭೇದಗಳಾದವು. 'ದ್ವಿಜ' ಎಂದರೆ ವಿದ್ವಾಂಸರ ಹೆಸರು 'ಆರ್ಯ' ; ಮತ್ತು ಮೂರ್ಖರ ಹೆಸರು 'ಶೂದ್ರ' ; ಮತ್ತು 'ಅನಾರ್ಯ', ಎಂದರೆ ತಿಳುವಳಿಕೆ ಇಲ್ಲದವನು, ಎಂದಾಯಿತು.

(ಆರ್ಯರ ಭಾರತಾಗಮನ)

ಪ್ರಶ್ನೆ :—ಮತ್ತೆ, ಅವರು ಇಲ್ಲಿಗೆ ಹೇಗೆ ಬಂದರು ?

ಉತ್ತರ :—ಯಾವಾಗ ಆರ್ಯರ ಮತ್ತು ದಸ್ಯುಗಳ ನಡುವೆ, ಎಂದರೆ 'ದೇವ ಜನರು' ಎನ್ನಿಸಿಕೊಂಡ ವಿದ್ವಾಂಸರ, ಹಾಗೂ 'ಅಸುರರು' ಎನ್ನಿಸಿಕೊಂಡ ಅವಿದ್ವಾಂಸರ ನಡುವೆ ಸದಾ ಕಲಹ-ಕಿತ್ತಾಟ ಆಗಲಾರಂಭಿಸಿತೋ ; ಯಾವಾಗ ಬಹಳ ಉಪದ್ರವವಾಗಲಾರಂಭಿಸಿತ್ತೋ, ಆಗ ಆರ್ಯರು, ಭೂಲೋಕದಲ್ಲೆಲ್ಲಾ ಈ ಭೂಮಿಯು ಖಂಡವೇ ಉತ್ತಮವೆಂದು ತಿಳಿದು, ಇಲ್ಲಿಯೇ ಬಂದು ನೆಲೆಸಿದರು. ಇದೇ ಕಾರಣದಿಂದ, ಈ ದೇಶಕ್ಕೆ 'ಆರ್ಯಾವರ್ತ', ಎಂದು ಹೆಸರಾಯಿತು.

(ಸತ್ಯಾರ್ಥ ಪ್ರಕಾಶ, ಅಷ್ಟಮ ಸಮುಲ್ಲಾಸ)

* * *

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥಕರ್ತರು

ಸ್ವಾಮೀ ವಿದ್ಯಾನಂದ ಸರಸ್ವತೀ ಅವರು ವೈದಿಕ ಸಿದ್ಧಾಂತದ ರಹಸ್ಯವನ್ನು ತಿಳಿದ ವಿದ್ವಾಂಸರೂ, ಯಶಸ್ವೀ ಲೇಖಕರೂ, ಹಾಗೂ ಕುಶಲ ವಕ್ತಾರರೂ ಆಗಿದ್ದಾರೆ. ಸಂಸ್ಕೃತ ವಾಙ್ಮಯದಲ್ಲಿ ವೈದಿಕ, ಜೈನ ಮತ್ತು ಬೌದ್ಧ ಧರ್ಮಗಳ ಆಚಾರ್ಯರುಗಳಿಂದ ಪ್ರತಿಪಾದಿತವಾಗಿರುವ ಸೂತ್ರಾತ್ಮಕ ದರ್ಶನಶಾಸ್ತ್ರಗಳ ಬಗ್ಗೆ ಆಧುನಿಕ ಕಾಲದಲ್ಲೂ ಆವರ ಪರಂಪರೆಯನ್ನುಳಿಸಿಕೊಂಡು ಬಂದಿರುವ ಶ್ರೇಯಸ್ಸು ಸ್ವಾಮೀ ವಿದ್ಯಾನಂದ ಸರಸ್ವತೀ ಅವರಿಗೆ ಸಲ್ಲುತ್ತದೆ. ಸ್ವಾಮೀಜೀಯವರ ಪ್ರತಿಪಾದನೆಯ ಶೈಲಿಯೇ ಅವರ ವೈಶಿಷ್ಟ್ಯವಾಗಿರುತ್ತದೆ. ಪೂರ್ವಾಶ್ರಮದಲ್ಲಿ ಆಚಾರ್ಯ ಲಕ್ಷ್ಮೀದತ್ತ ದೀಕ್ಷಿತರೆಂದು ಪ್ರಸಿದ್ಧರಾಗಿದ್ದ ಸ್ವಾಮೀಜೀಯವರು ಐವತ್ತು ವರ್ಷಗಳವರೆಗೆ ಶಿಕ್ಷಣಕ್ಷೇತ್ರದಲ್ಲಿ ದುಡಿದಿದ್ದಾರೆ. ಸುಮಾರು ಇಪ್ಪತ್ತು ವರ್ಷಗಳ ಕಾಲ ಪದವೀ ಹಾಗೂ ಪದವ್ಯುತ್ತರ ಕಾಲೇಜುಗಳಲ್ಲಿ ಆಚಾರ್ಯರಾಗಿದ್ದರು. ಅವರ ವಿದ್ವತ್ತು ಮತ್ತು ಸೇವಾ ಕಾರ್ಯಗಳನ್ನು ಲಕ್ಷ್ಯದಲ್ಲಿರಿಸಿಕೊಂಡು, ಭಾರತದ ರಾಷ್ಟ್ರಪತಿಯವರು ಅವರನ್ನು ಪಂಜಾಬಿನ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸದಸ್ಯರನ್ನಾಗಿ ನೇಮಿಸಿದ್ದರು. ಸ್ವಲ್ಪಕಾಲದವರೆಗೆ ಅವರು ವೃಂದಾವನ ಗುರುಕುಲ ವಿಶ್ವವಿದ್ಯಾಲಯದ ಆಚಾರ್ಯರಾಗಿಯೂ ವಿರಾಜಮಾನರಾಗಿದ್ದರು. ಅನೇಕ ವರ್ಷಗಳವರೆಗೆ ಗುರುಕುಲ ಕಾಂಗಡೀ ವಿಶ್ವವಿದ್ಯಾಲಯದ ವಿದ್ಯಾಸಭಾ (ಸೆನೆಟ್), ಮತ್ತು ಹಲವು ವಿಶೇಷ ಸಮಿತಿಗಳ ಸದಸ್ಯರಾಗಿದ್ದರು. ಈಗಲೂ ಪಂಜಾಬ್, ಹರಯಾಣಾ, ಹಾಗೂ ದೆಹಲಿಗಳಲ್ಲಿ ಅನೇಕ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳೊಡನೆ ನಿಕಟ ಸಂಪರ್ಕ ಹೊಂದಿದ್ದಾರೆ. ಈಗ ಅವರು ನವದೆಹಲಿಯ D–14/16, ಮಾಡಲ್ ಟೌನಿನ ನಿವಾಸಿಯಾಗಿದ್ದಾರೆ.

CC-0. In Public Domain. Gurukul Kangri Collection, Haridwar